

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 Issue : 48 Friday 25-10-2024 E-mail : maruti.b.hosamani76@gmail.com Page: 4 Price : Rs. 1/-

## ಗೋಲಗೇರಿ ಗ್ರಾಪಂ ಅಧ್ಯಕ್ಷರು ಅವಿರೋಧ ಆಯ್ಕೆ



**ಸಿಹಿ ಕಹಿ ಸುದ್ದಿ,**

**ಗೋಲಗೇರಿ :** ಅಧ್ಯಕ್ಷರು ಸ್ಥಾನಕ್ಕೆ ಇಂದು ಚುನಾಣೆ ನಡೆಯಿತು, 22 ಸದಸ್ಯರು ಇದ್ದಾರೆ, ಅದರಲ್ಲಿ ಬಿಜೆಪಿ ಪಕ್ಷದ ಅಭ್ಯರ್ಥಿ ಶ್ರೀಮತಿ ಹಣಮವ್ವ, ನಾಗಪ್ಪ, ಜೈನಾಪುರ ಅವರು ನಾಮಪತ್ರ ಸಲ್ಲಿಸಿದರು ಅವರ ವಿರುದ್ಧ ಯಾವುದೇ ನಾಮಪತ್ರ ಸಲ್ಲಿಕೆ ಆಗದೆ ಇದ್ದ ಕಾರಣ,ಹಣಮವ್ವ ಜೈನಾಪುರ ಅವರನ್ನು ಅವಿರೋದವಾಗಿ ಆಯ್ಕೆ ಯಾಗಿದ್ದಾರೆ ಎಂದು ಚುನಾವಣೆ ಅಧಿಕಾರಿಗಳಾದ ಅಗ್ನಿ, ಅವರು ತಿಳಿಸಿದರು, ಸಿಂದಗಿ ತಾಲ್ಲೂಕಿನ ಗೋಲಗೇರಿ ಗ್ರಾಮ ಪಂಚಾಯತಿ ಅಧ್ಯಕ್ಷರು ಚುನಾವಣೆಯಲ್ಲಿ ಅಧ್ಯಕ್ಷರು ಸ್ಥಾನ ಬಿಜೆಪಿ ತೆಕ್ಕಗೆ ಸಿಕ್ಕಿತು, ಸಂದರ್ಬದಲ್ಲಿ ಮಾತನಾಡಿದ ಬಿಜೆಪಿ ಮಂಡಲ ಅಧ್ಯಕ್ಷ ಸಂತೋಷ ಪಾಟೀಲ ಅವರು ಸಮಗ್ರ ಗ್ರಾಮ ಪಂಚಾಯಿತಿ ವಾಪ್ತಿಯಲ್ಲಿ ಬರುವಂತೆ ಎಲ್ಲಾ ಹಳ್ಳಿಗಳಿಗೆ ಅಬಿವೃದ್ದಿಗೆ ಎಲ್ಲರೂ ಸಹಕಾರ ಕೊಡಬೇಕು ಸ್ವಚ್ಚತೆಗೆ ಹಾಗೂ ನೀರು ವಿದ್ಯುತ್, ಗ್ರಾಮಗಳ ಮೂಲ ಸೌಕರ್ಯವನ್ನು ಆದ್ಯತೆಗೆ ಕೋಡಬೇಕು ಸಮಗ್ರ ಅಭಿವೃದ್ದಿ ನೂತನ ಗ್ರಾಮ ಪಂಚಾಯಿತಿ ಅಧ್ಯಕ್ಷರು ಶ್ರಮಿಸಬೇಕು ಎಂದು ಹೇಳಿದರು. ಈ ಸಂದರ್ಬದಲ್ಲಿ ಸಿದ್ದು ಬುಳ್ಳಾ ಅವರು ಮಾತನಾಡಿ ಪಂಚಾಯತಿ ವಾಪ್ತಿಯಲ್ಲಿ ಬರುವ ಎಲ್ಲಾ ಹಳ್ಳಿಗಳಿಗೆ ಕುಂದು ಕೊರತೆಗಳನ್ನು ಆಗದಂತೆ ಮೂಲ ಸೌಕರ್ಯವನ್ನು ಒದಗಿಸಬೇಕು ಎಂದು ಹೇಳಿದರು, ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ, ಪ್ರಭುಗೌಡ ಪಾಟೀಲ ಶ್ರೀಶ?ಲ ಚಳ್ಳಗಿ ಗೌಡಣ್ಣ ಆಲಮೇಲ ಸಂಗನಗೌಡ ಪಾಟೀಲ ಮಹಾಂತೇಶ ಸಾತಿಹಾಳ ಸ?ಪೋನಸಾಬ ಕೋರವಾರ ಶಶಿಕಾಂತ ನಾಯ್ಕಲ ಶಿವಣ್ಣ ನಾಗಣಸೂರ ಗೋಲ್ಲಾಳಪ್ಪಗೌಡ ನಾಗಣಸೂರ ಸುನೀಲಗೌಡ ಪಾಟೀಲ ಅಮ್ಮೋಗಿ ಜ?ನಾಪುರ ಹಾಗೂ ಗ್ರಾಮ ಪಂಚಾಯತಿ ಉಪಾಧ್ಯಕ್ಷರು ಹಾಗೂ ಅಧ್ಯಕ್ಷರಿಗೆ ಬೆಂಬಲ ಮಾಡಿದ ಸದಸ್ಯರು ಹಾಗೂ ಬಿಜೆಪಿ ಪಕ್ಷದ ಕಾರ್ಯಕರ್ತರು ಹಾಗೂ ಪಂಚಾಯತಿ ಸಿಬ್ಬಂದಿ ಗಳು, ಮತ್ತು ಕಲಕೇರಿ ಪೋಲಿಸ್ ಠಾಣೆಯ ಸಿಬ್ಬಂದಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಭೀಮಪ್ಪ.ಹಚ್ಯಾಳ.ದೇವರಹಿಪ್ಪರಗಿ**

## ಪಟ್ಟಣ ಪಂಚಾಯಿತಿಯಿಂದ "ನಮ್ಮ ನಡೆ ವಾರ್ಡಿನ ಕಡೆ"

**ಸಿಹಿ ಕಹಿ ಸುದ್ದಿ**

**ಮರಿಯಮ್ಮನಹಳ್ಳಿ :** ಪಟ್ಟಣ ಪಂಚಾಯತಿಯ ಅಧ್ಯಕ್ಷರು, ಮುಖ್ಯಾಧಿಕಾರಿಗಳು, ಸಿಬ್ಬಂದಿಗಳು, ಸ್ಥಾಯಿ ಸಮಿತಿ ಅಧ್ಯಕ್ಷರು, ವಾರ್ಡಿನ ಸದಸ್ಯರು ಸೇರಿ ಪಟ್ಟಣದಲ್ಲಿ ಇಂದು ವಿನೂತನವಾಗಿ ಅಭಿವೃದ್ಧಿಗಾಗಿ "ನಮ್ಮ ನಡೆ ವಾರ್ಡಿನ ವಾರ್ಡಿನ ಕಡೆ" ಎನ್ನುವ ಘೋಷ ವಾಕ್ಯದೊಂದಿಗೆ ಹೊಸ ಪ್ರಯೋಗವನ್ನು ಪ್ರಾರಂಭಿಸಿದ್ದಾರೆ.

ಅಭಿವೃದ್ಧಿಗಾಗಿ ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಯಿಂದವಿನೂತನಪ್ರಯೋಗಪ್ರಾರಂಭವಾಗಿದೆ.ಮೊದಲನೇ ದಿನ ದಂದು 1, 2, ಮತ್ತು 15 ನೇ ವಾರ್ಡ್ ಗಳಿಗೆ ಭೇಟಿ ನೀಡಿ ರಸ್ತೆ, ಚರಂಡಿ, ಕುಡಿಯುವ ನೀರಿನ ಸಂಪರ್ಕ ವೀಕ್ಷಿಸಿದರು, ರಸ್ತೆ, ಚರಂಡಿಗಳು ಒತ್ತುವರಿ ಯಾಗಿದ್ದನ್ನು ಮತ್ತು ಸ್ವಚ್ಛತೆ ಇಲ್ಲದಿರುವುದನ್ನು, ನಳ ಹಾಕಿಕೊಂಡ ತೆರೆದ ಕೊಳವೆ ಬಾವಿಯಿಗಳ ಗುಂಡಿಯಲ್ಲಿ ನಿಂತ ಕೊಳಕು ನೀರನ್ನು ಕಂಡು ಅಧ್ಯಕ್ಷರಾದ ಹುಸೇನ್ ಭಾಷ ಅವರು ಕೆಂಡಮಂಡಲವಾಗಿ ಬೇಸರ ವ್ಯಕ್ತಪಡಿಸಿ, ನಮ್ಮ ಮನೆಗಳ ಮುಂದೆ ನಾವೇ ಸ್ವಚ್ಛತೆಯನ್ನು ಕಾಪಾಡಿ ಕೊಳ್ಳಬೇಕು. ಈ ರೀತಿಯ ಸ್ವಚ್ಛತೆ ಇಲ್ಲದಿದ್ದರೆ, ಆರೋಗ್ಯ ಕಾಪಾಡಿ ಕೊಳ್ಳಲು ಹೇಗೆ ಸಾಧ್ಯ, ರೋಗಗಳಿಗೆ ತುತ್ತಾಗುವ ಸಾಧ್ಯತೆ ಹೆಚ್ಚಿದೆ. ಹಾಗಾಗಿ ನಮ್ಮ ಸುತ್ತಮುತ್ತ ಪರಿಸರವನ್ನು ನಾವೇ ಸ್ವಚ್ಛವಾಗಿಟ್ಟು ಕೊಳ್ಳಬೇಕು ಮತ್ತು ಖಾಲಿ ನಿವೇಶನಗಳಲ್ಲಿ ಗಿಡ ಗಂಟೆಗಳು ಬೆಳೆದಿದ್ದನ್ನು ಗಮನಿಸಿ ಅವುಗಳನ್ನು ಕತ್ತರಿಸಿ ಸ್ವಚ್ಛವಾಗಿಟ್ಟು ಕೊಳ್ಳಲು ಮಾಲೀಕರಿಗೆ ತಿಳಿಸಿದರು.

ಅಧ್ಯಕ್ಷ ಹುಸೇನ್ ಭಾಷ ಮಾತನಾಡಿ 1, 2 ಮತ್ತು 15 ವಾರ್ಡಗಳು ಅಭಿವೃದ್ಧಿಯಿಂದ ಹಿಂದಿವೆ ಹಾಗಾಗಿ ಈ ವಾರ್ಡ್ ಗಳಿಗೆ ಮೊದಲು ಭೇಟಿ ನೀಡುತ್ತಿದ್ದು . ಫಾರಂ 3 ಕೊಡಲು ತುಂಬಾ ಕಷ್ಟವಾಗುತ್ತಿತ್ತು ನೈಜತೆಯನ್ನು ಅರಿತು ನೀಡಲು ಈ ಕಾರ್ಯಕ್ರಮ ರೂಪಿಸಲಾಗಿದೆ. ಅಮೃತ 2 ಯೋಜನೆ ಕುಡಿಯುವ ನೀರು ಪೈಪ್ ಹಾಕಲು ಸ್ಥಳಾವಕಾಶ ವಿಲ್ಲದೆ ರಸ್ತೆ ಚರಂಡಿಗಳನ್ನು ಒತ್ತುವರಿ ಮಾಡಿದ್ದಾರೆ. ನಂತರ ಯು.ಜಿ.ಡಿ ಸಹ ಬರುತ್ತದೆ ಆಗ ಇನ್ನೂ ಸಮಸ್ಯೆ ಉದ್ಭವವಾಗುತ್ತದೆ. ಹಾಗಾಗಿ ಸೋಮವಾರ ಪೈಪ್ ಲೈನ್ ಕಾಮಗಾರಿಪ್ರಾರಂಭಿಸಲಾಗುವುದು.ಅಂತಹಸಂದರ್ಭದಲ್ಲಿ ಅಡ್ಡಿಯಾದಂತಹ ಕಟ್ಟಡಗಳನ್ನು ತೆರವು ಗೊಳಿಸಲು



ಸೂಚಿಸಲಾಗಿದೆ. ಪ್ರೆಶರ್ ಫಿಲ್ಟರ್ ನಾವು ಮಾಡಿಸಿದ್ದೇವೆ. ಎಂದು ಯಾರೋ ಹೇಳುತ್ತಿದ್ದಾರೆ. ಅದನ್ನು ಯಾರು ಮಾಡಿಸಿಲ್ಲ ಸ್ಥಳೀಯ ಪಂಚಾಯಿತಿಯಿಂದ 2019 ರಿಂದ ಇಲ್ಲಿಯವರೆಗೂ51.60ಲಕ್ಷದಉಳಿತಾಯದಹಣನಮ್ಮಲ್ಲಿದೆ. ಪ್ರೆಶರ್ ಫಿಲ್ಟರ್ ಗಾಗಿ 70 ಲಕ್ಷ ಬೇಕಾಗಿದೆ. ಹೆಚ್ಚಿನ ಹಣಕ್ಕಾಗಿ, ಜಿಲ್ಲಾಧಿಕಾರಿಗಳು ಮತ್ತು ಯೋಜನಾ ನಿರ್ದೇಶಕರ ಗಮನಕ್ಕೆ ತಂದಿದ್ದು ಹೆಚ್ಚುವರಾಗಿ 20 ಲಕ್ಷವನ್ನು ಒದಗಿಸಿ ಕೊಡುತ್ತೇವೆ ಕೂಡಲೇ ಟೆಂಡರ್ ಕರೆದು ಕಾಮಗಾರಿ ಪ್ರಾರಂಭಿಸಿ ಎಂದು ಹೇಳಿದ್ದಾರೆ.ಹಾಗಾಗಿ ಒಂದು ತಿಂಗಳಲ್ಲಿ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗುವುದು ಎಂದು ಹೇಳಿದರು.

ಮುಖ್ಯಾಧಿಕಾರಿ ಖಾಜಾ ಮೈನುದ್ದೀನ್ ಮಾತನಾಡಿ ನಾವು ಕಚೇರಿಯಲ್ಲಿ ಕುಳಿತು ಕೊಂಡು ಪರಿ ಪೂರ್ಣವಾಗಿ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ,ಪ್ರಮಾಣಿಸಿದರು ಪ್ರತ್ಯಕ್ಷವಾಗಿ ನೋಡುಎನ್ನುವಗಾದೆಹಾಗೆನಾವುಕಚೇರಿಯನ್ನುಬಿಟ್ಟುಸ್ಥಳಕ್ಕೆ ಬಂದುಪರಿಶೀಲಿಸಿನೋಡಿದಾಗಸಮಸ್ಯೆಗಳಅರಿವಾಗುತ್ತದೆ. ಹಾಗಾಗಿಅಧ್ಯಕ್ಷರುಸದಸ್ಯರುಮತ್ತುನಮ್ಮಸಿಬ್ಬಂದಿಗಳೊಂದಿಗೆ ವಾರ್ಡ್ ವೀಕ್ಷಣೆ ಮಾಡಿ, ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸಲು ಮತ್ತು ಸಮಸ್ಯೆಗಳನ್ನು ತಕ್ಷಣದಲ್ಲೇ ಬಗೆಹರಿಸುವುದಕ್ಕೆ ಪ್ರಯತ್ನ ಮಾಡಲು ಸಾಧ್ಯವಾಗುತ್ತದೆ. ಹಾಗಾಗಿ ನಮ್ಮ "ನಡೆ ವಾರ್ಡ್ ಕಡೆ" ಎನ್ನುವ ಘೋಷ ವಾಕ್ಯದೊಂದಿಗೆ ವಾರ್ಡ್ ವೀಕ್ಷಣೆ ಮಾಡುತ್ತಿದ್ದೇವೆ ಈ ಸಂದರ್ಭದಲ್ಲಿ ಕಂಡು ಬಂದಿದ್ದು ಪ್ರಮುಖವಾಗಿ ಮಹಿಳೆಯರಿಗೆ ಶೌಚಾಲಯದ ಕೊರತೆ ಇದೆ. ಶೌಚಾಲಯನಿರ್ಮಾಣಕ್ಕಾಗಿ15ಲಕ್ಷರುಪಾಯಿಗಳಟೆಂಡರ್ ಆಗಿದೆ ಅದನ್ನು ಕೂಡಲೇ ಕಾಮಗಾರಿ ಪ್ರಾರಂಭಿಸಲು ಸೂಚಿಸುತ್ತೇವೆ.ಸ್ವಚ್ಛಭಾರತ್‌ಮಿಷನ್‌ನಲ್ಲಿಶೌಚಾಲಯವ್ಯವಸ್ಥೆ ಮಾಡಲಾಗುವುದು.ಮತ್ತುಫಾರಂ–3ಕೊಡುವವಿಚಾರದಲ್ಲಿ ಸ್ಥಳವನ್ನು ವೀಕ್ಷಿಸಲಾಗಿ ಸಮಸ್ಯೆಗಳನ್ನು ಗಮನಿಸಲಾಗಿದೆ. ಸರಿಯಾದ ದಾಖಲೆಗಳಿದ್ದರೆ ದಾಖಲೆಗಳ ಪ್ರಕಾರ ನಿಯಮಾನುಸಾರವಾಗಿನೀಡಲುಮೇಲಧಿಕಾರಿಗಳಗಮನಕ್ಕೆ ತಂದು ಫಾರಂ 3 ಕೊಡಲಾಗುವುದು.ತೆರವು:–ಸೋಮವಾರ ಪೈಪ್ ಲೈನ್ ಕಾಮಗಾರಿ ಪ್ರಾರಂಭಿಸಲಾಗುವುದು. ರಸ್ತೆ ಮತ್ತು ಚರಂಡಿಗಳು ಬಹುತೇಕವಾಗಿ ಒತ್ತುವರಿಯಾಗಿದ್ದು. ಅಮೃತ 2 ಯೋಜನೆಯಲ್ಲಿ ಮನೆ ಮನೆಗೂ ಕುಡಿಯುವ ನೀರಿನ ಪೈಪ್ ಮತ್ತು ನಳ ಹಾಕುವುದಕ್ಕೆ ತೊಂದರೆಯಾಗುತ್ತದೆ. ಹಾಗಾಗಿ ಅಭಿವೃದ್ಧಿಯ ದೃಷ್ಟಿಯಿಂದ ಅನಧಿಕೃತವಾಗಿ ಒತ್ತುವರಿಯಾಗಿರುವ ಕಟ್ಟಡಗಳನ್ನು ಅನಿವಾರ್ಯವಾಗಿ ತೆರವು ಗೊಳಿಸಲಾಗುವುದು ಎಂದರು.

ಮನವಿ:– ಸಮತಾ ಸೈನಿಕ ದಳ ಸಂಘಟನೆಯ ಕಾರ್ಯದರ್ಶಿಯಾದ ಎಲ್. ಸ್ವಾಮಿ ಇವರು ಅಧ್ಯಕ್ಷರ ಪರವಾಗಿ 15 ವಾರ್ಡಿನ 9 ನೇ. ಅಂಗನವಾಡಿ ಕೇಂದ್ರ–ಕ್ಕೆ ಪಟ್ಟಣ ಪಂಚಾಯಿತಿ ಯಿಂದ ನಿವೇಶನ ಗುರುತಿಸಲು ಮನವಿ ಕೊಡಲಾಯಿತು. ಮತ್ತು ಎಂ. ದುರುಗಪ್ಪನೇತೃತ್ವದಲ್ಲಿ ಮಹಿಳೆಯರಿಗಾಗಿ ಸಾಮೂಹಿಕ ಶೌಚಾಲಯ ನಿರ್ಮಿಸಲು ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತಿ ಸದಸ್ಯರಾದ ಎಲ್ ವಸಂತ. ಮರಡಿ ಸುರೇಶ, ಎಲ್. ಪರುಶುರಾಮ, ಮುಖಂಡರಾದ ಹುಲಿಗಿ ಬಾಯಿ ರುದ್ರ ನಾಯಕ್, ಜೊತಿ ಸುರೇಶ, ಮಂಜುನಾಥ, ಪಂಚಾಯಿತಿ ಮಾಜಿ ಉಪಾಧ್ಯಕ್ಷರಾದ ಎಲ್. ಮಂಜುನಾಥ, ಊರಿನ ಮುಖಂಡರಾದ ಎಲ್. ನಾಗರಾಜ, ಬಿ. ಆನಂದಪ್ಪ, ಎಂ. ದುರುಗಪ್ಪ, ಸರದಾರ, ಸ್ವಾಮಿ ಇತರರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಾಲತೇಶ್.ಶೆಟ್ಟರ್.ಹೊಸಪೇಟೆ**

## ಮುಂದುವರೆದ ಸದ್ಗುಣಗಳ ದೀಕ್ಷೆ ದುಶ್ಚಟಗಳ ಭಿಕ್ಷೆ
## ಮಳೆಯಲ್ಲಿ ಹೂ ಮಳೆಯಿಂದ ಶ್ರೀಗಳಿಗೆ ಸ್ವಾಗತ ಮಾಡಿದ ಭಕ್ತರು!

**ತೇರದಾಳ :** ಭಕ್ತರ 4 ಕೋಟಿ ದೇಣಿಗೆ ಹಣದಲ್ಲಿ ನಿರ್ಮಾಣಗೊಂಡಿರುವ ಅಲ್ಲಮಪ್ರಭುದೇವರ ನೂತನ ದೇವಸ್ಥಾನ ಲೋಕಾರ್ಪಣೆ ನಿಮಿತ್ತ ಡಾ. ಮಹಾಂತಪ್ರಭು ಹಾಗೂ ಗಂಗಾಧರ ದೇವರು ಪ್ರಭು ಪರಮಜ್ಯೋತಿಯೊಂದಿಗೆ ಕೈಗೊಂಡಿರುವ ಸದ್ಗುಣಗಳ ದೀಕ್ಷೆ ದುಶ್ಚಗಳ ಭಿಕ್ಷೆ ಪಾದಯಾತ್ರೆ ಶುಕ್ರವಾರ ಬೆಳ್ಳಂ ಬೆಳಗ್ಗೆ ಶುರುವಾದ ಮಳೆಯಲ್ಲಿಯೂ ನಡೆಯಿತು.



ಅಲ್ಲಮಪ್ರಭು ದೇವಸ್ಥಾನದಿಂದ ಪ್ರಾರಂಭಗೊಂಡ ಪಾದಯಾತ್ರೆ, ಸಿದ್ದೇಶ್ವರ ಗಲ್ಲಿ, ಜವಳಿ ಬಜಾರ, ಕಾಳಿನ ಬಜಾರ, ಹಳಪೇಠ ಗಲ್ಲಿ, ಅರಳಿಕಟ್ಟೆ, ಅಂಬೇಡ್ಕರ್ ವೃತ್ತ, ಬೋವಿ ಗಲ್ಲಿ, ಗುಮ್ಮಟ ಗಲ್ಲಿ ಮುಖಾಂತರ ವಿರಕ್ತಮಠದ ವರೆಗೆ ಮುಕ್ತಾಯಗೊಂಡಿತು.

ಜೋರಾದ ಮಳೆ ಸುರಿಯುತ್ತಿದ್ದರು ಪಾದಯಾತ್ರೆ ನಡೆಸಿದ ಶ್ರೀಗಳ ಜತೆಗೆ ನೂರಾರು ಮಹಿಳೆಯರು, ಹಿರಿಯರು, ಯುವಕರು ಚಿಕ್ಕಮಕ್ಕಳು ಮಳೆಯಲ್ಲಿಯೇ ಅಲ್ಲಮಪ್ರಭುದೇವರಿಗೆ ಬಸವೇಶ್ವರರಿಗೆ ಜೈಕಾರ ಹಾಕುತ್ತ ಹೆಜ್ಜೆ ಹಾಕಿದರು. ದಾರಿಯುದ್ದಕ್ಕೂ ಭಕ್ತರು ಶ್ರೀಗಳಿಗೆ ಹೂಗಳನ್ನು ಸುರಿದು ಹೂ ಮಳೆಯಂತೆ ವಾತಾವರಣ ಸೃಷ್ಟಿ ಮಾಡಿದರು. ಅಲ್ಲಲ್ಲಿ ಅಲ್ಲಮಪ್ರಭುದೇವರ ಬಸವಣ್ಣನ ಭಾವಚಿತ್ರದ ಪೂಜೆ, ಶ್ರೀಗಳಿಗೆ ಮುತ್ತೈದೆಯರಿಂದ ಪಾದಪೂಜೆ, ಆರತಿ ಜರುಗಿತು. ವಾದ್ಯಮೇಳದವರು ಕೂಡ ಮಳೆಯಲ್ಲಿಯೂ ವಾದ್ಯ ಬಾರಿಸಿದರು.

ರಕ್ತಮಠದಲ್ಲಿ ನೂರಾರು ಭಕ್ತರಿಗೆ ರುದ್ರಾಕ್ಷಿ ಧಾರಣೆ ಮಾಡಲಾಯಿತು. ಹಿರಿಯರಾದ ಮಲ್ಲಪ್ಪಣ್ಣ ಜಮಖಂಡಿ, ನಿಂಗಪ್ಪಣ್ಣ ಮಾಲಗಾಂವಿ, ಮಹಾಂತೇಶ ಪಂಚಾಕ್ಷರಿ, ಅಲ್ಲಪ್ಪ ಮದಲಮಟ್ಟಿ, ಯಮನಪ್ಪ ಮುಕುಂದ, ಮುರಗೇಶ ಮಿರ್ಜಿ, ಸಚಿನ ಕೊಡತೆ, ಸಂತೋಷ ಜಮಖಂಡಿ, ಶಂಕರ ಕುಂಬಾರ, ರವಿ ಸಲಬನ್ನವರ, ಸಿದ್ದಪ್ಪ ಜಕಾತಿ, ಜಗದೀಶ ಮುಕುಂದ, ಪ್ರಭು ಗದಗಿ, ಬಸವಪ್ರಭು ತೆಳಗಿನಮನಿ ಮತ್ತಿತರಿದ್ದರು.

## ಪೃಥ್ವಿ ಬ್ಯಾಕೋಡ ರಾಷ್ಟ್ರಮಟ್ಟಕ್ಕೆ ಆಯ್ಕೆ



**ಮಹಾಲಿಂಗಪುರ :** ಸಮೀಪದ ಕೆಸರಗೊಪ್ಪ ಗ್ರಾಮದ 14 ವರ್ಷದ ಬಾಲಕಿ, 8ನೇ ತರಗತಿ ವಿದ್ಯಾರ್ಥಿನಿ ಪೃಥ್ವಿಧರೆಪ್ಪಬ್ಯಾಕೋಡರಾಷ್ಟ್ರಮಟ್ಟದ ಅಥ್ಲೆಟಿಕ್ಸ್‌ಗೆ ಆಯ್ಕೆಯಾಗಿದ್ದಾಳೆ.

ಅ.6ರಿಂದ 10ರವರೆಗೆ ಉತ್ತರ ಪ್ರದೇಶದ ವಾರಣಾಸಿಯಲ್ಲಿ ನಡೆದ ಸಿಬಿಎಸ್‌ಇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ 200ಮೀ. ಮತ್ತು 800ಮೀ ಓಟದಲ್ಲಿ ಭಾಗವಹಿಸಿ 800ಮೀ.ಓಟದಲ್ಲಿ 5ನೇ ಸ್ಥಾನ ಗಳಿಸಿ ಭರವಸೆ ಮೂಡಿಸಿ ಗಮನ ಸೆಳೆದಿದ್ದಾಳೆ. ಅದೇ ರೀತಿ ಅ.24ರಿಂದ 29ರವರೆಗೆ ಓಡಿಸ್ಸಾದ ಭುವನೇಶ್ವರದಲ್ಲಿ ಜರುಗಲಿರುವ 39ನೇ ರಾಷ್ಟ್ರೀಯ ಜೂನಿಯರ್ ಚಾಂಪಿಯನ್‌ಶಿಪ್ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾಳೆ. ಅ.16 ರಿಂದ 19ರವರೆಗೆ ಆಂಧ್ರದ ಗುಂಟೂರಿನಲ್ಲಿ ಜರುಗುವ ರಾಷ್ಟ್ರೀಯ ಜ್ಯೂನಿಯರ್ ಚಾಂಪಿಯನ್‌ಶಿಪ್ 35ನೇ ಸೌಥ್ ಜೋನ್ ಕ್ರೀಡಾಕೂಟದ 60 ಮೀ.ಓಟ, 600 ಮೀ.ಓಟ, ಎತ್ತರ ಜಿಗಿತ ಈ ಮೂರು ವಿಭಾಗದ ಟ್ರಯಥ್ಲಾನ್ 'ಸಿ' ವಿಭಾಗದಕ್ಕೆ ಆಯ್ಕೆಯಾಗಿ ಗಮನ ಸೆಳೆದಿದ್ದಾಳೆ.

ಅಂತಾರಾಷ್ಟ್ರೀಯ ಆಟಗಾರ ಬಿ.ಜಿ.ನಾಗರಾಜ, ತಾಲೂಕು ಅಥ್ಲೆಟಿಕ್ಸ್ ಅಸೋಷಿಯೇಷನ್ ಕಾರ್ಯದರ್ಶಿ ಶಿವಾನಂದ ಮಾಳಿ, ಜಿಲ್ಲಾ ಅಸೋಷಿಯೇಷನ್ ಕಾರ್ಯದರ್ಶಿ ಯಲಗನ್ನವರ, ಮಹಾಂತೇಶ ಬಳ್ಳಾರಿ, ಯಲ್ಲಪ್ಪ ಭರಮನ್ನವರ, ಸಂಗಮೇಶ ಮುಕಾರ್ತಿಹಾಳ, ಶಿವಯ್ಯ ಮಠಪತಿ, ಯಲ್ಲಪ್ಪ ಜಗದಾಳ, ಮಹಾಲಿಂಗ ಮಾದರ, ಸದಾಶಿವ ಕುರಿ ಅವರ ಮಾರ್ಗದರ್ಶನ ಮತ್ತು ಪ್ರೋತ್ಸಾಹವೇ ಕಾರಣ ಎಂದು ಸಾಧಕಿ ಪೃಥ್ವಿಯ ತಂದೆ ಪ್ರೌಢ ಶಾಲಾ ಶಿಕ್ಷಕ ಧರೆಪ್ಪ ಬ್ಯಾಕೋಡ, ತಾಯಿ ಪ್ರಾಥಮಿಕ ಶಾಲಾ ಶಿಕ್ಷಕಿ ಸವಿತಾ ಹೇಳುತ್ತಾರೆ.

## ನಿರಂತರವಾಗಿ ಸಿಂಗಲ್ ಪೇಸ್ ವಿದ್ಯುತ್ ನೀಡಲು ಮನವಿ



**ತೇರದಾಳ :** ನಮ್ಮ ಗ್ರಾಮದಲ್ಲಿ ಕೇವಲ ನಾಲ್ಕು ಗಂಟೆ ಮಾತ್ರ ಸಿಂಗಲ್ ಪೇಸ್ ವಿದ್ಯುತ್ ನೀಡಲಾಗುತ್ತಿದೆ. ಬದಲಾಗಿ ಸಂಜೆ 6 ಗಂಟೆಯಿಂದ ಬೆಳಗ್ಗೆ 6 ಗಂಟೆ ವರೆಗೆ ನಿರಂತರವಾಗಿ ಸಿಂಗಲ್ ಪೇಸ್ ವಿದ್ಯುತ್ ಪೂರೈಕೆ ಮಾಡಬೇಕೆಂದು ಒತ್ತಾಯಿಸಿ ಸಸಾಲಟ್ಟಿ ಗ್ರಾಮಸ್ಥರು ಸ್ಥಳೀಯ ಹೆಸ್ಕಾಂ ಶಾಖಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದ್ದಾರೆ.

ಗ್ರಾಮದಲ್ಲಿ ಬಹುತೇಕ ಜನ ತೋಟದ ವಸತಿಯಲ್ಲಿದ್ದಾರೆ. ತೋಟದ ವಸತಿ ಜನರಿಗೆ ಈಗ ಕೇವಲ ನಾಲ್ಕು ಗಂಟೆ ಮಾತ್ರ ಸಿಂಗಲ್ ಪೇಸ್ ನೀಡಲಾಗುತ್ತಿದೆ. ರಾತ್ರಿ ಸರದಿ ಇಲ್ಲದಿರುವಾಗ ಕಳ್ಳರ, ಹಾವು ಹುಳ ನಾಯಿಗಳ ಹಾವಳಿ ತೀವ್ರವಾಗಿದೆ. ರಾತ್ರಿ ವೇಳೆ ವಿದ್ಯುತ್ ಇಲ್ಲದಿರುವುದರಿಂದ ಕತ್ತಲಲ್ಲಿ ಬದುಕುವುದು ಬಹಳಷ್ಟು ಕಷ್ಟಕರ ಆಗುತ್ತಿದೆ. ಮಕ್ಕಳು ಸಾಕಷ್ಟು ಭಯ ಭೀತರಾಗುತ್ತಿದ್ದಾರೆ. ಮತ್ತು ವಿದ್ಯಾಭ್ಯಾಸಕ್ಕೂ ತೊಂದರೆ ಆಗುತ್ತಿದೆ. ಆದ್ದರಿಂದ 3ಪೇಸ್ ಜತೆಗೆ ಸಿಂಗಲ್ ಪೇಸ್ ವಿದ್ಯುತ್ ನಿರಂತರವಾಗಿ ನೀಡಬೇಕೆಂದು ಗ್ರಾಮ ಮುಖಂಡರಾದ ಇದರಿಂದ ತೋಟದ ವಸತಿ ಜನರಿಗೆ ತೀವ್ರ ತೊಂದರೆ ಆಗುತ್ತಿದೆ. ರಾಜು ಉಳ್ಳಾಗಡ್ಡಿ, ಹುಲೆಪ್ಪ ಹುಕ್ಕೇರಿ, ಪರಪ್ಪ ಮದಲಮಟ್ಟಿ, ಜಕ್ಕಪ್ಪ ಜಲಪೂರ, ರಾಜು ಬೆಳವಣಿಕಿ, ಮಹಾಂತೇಶ ಹುಂಡೇಕರ, ಪ್ರಭು ಮರಡಿ, ಮುತ್ತು ಭದ್ರಶೆಟ್ಟಿ, ಮಹೇಶ ಹುಕ್ಕೇರಿ, ಮಹೇಶ ಹನಗಂಡಿ ಮನವಿ ಪತ್ರದ ಮೂಲಕ ಹೆಸ್ಕಾಂ ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

## ದುಶ್ಚಟಗಳಿಂದ ದೂರವಿರಿ: ಸದಾಶಿವ ಗುರೂಜಿ



**ಮಹಾಲಿಂಗಪುರ :** ನಿತ್ಯ ಯೋಗ ಮಾಡುವುದರ ಜೊತೆಗೆ ದುಶ್ಚಟಗಳಿಂದ ದೂರವಿದ್ದು ಬದುಕನ್ನು ಸಾಗಿಸಿದರೆ ಅದೇ ತೃಪ್ತಿದಾಯಕ ಬದುಕಾಗುತ್ತದೆ ಎಂದು ರನ್ನಬೆಳಗಲಿ ಋಷಿ ಯೋಗಾಸನ ಟ್ರಸ್ಟ್‌ನ ಯೋಗ ಗುರು ಸದಾಶಿವ ಗುರೂಜಿ ಹೇಳಿದರು.

ಸಮೀಪದ ರನ್ನಬೆಳಗಲಿ ಪಟ್ಟಣದ ಕವಿಚಕ್ರವರ್ತಿ ರನ್ನ ವೃತ್ತದಲ್ಲಿರುವ ಹರಳಯ್ಯ ಸಮುದಾಯ ಭವನದಲ್ಲಿ ಮುಧೋಳದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಬಿ.ಸಿ. ಟ್ರಸ್ಟ್ ಹಾಗೂ ರನ್ನಬೆಳಗಲಿಯ ನವ ಜೀವನ ಸಮಿತಿ ಸದಸ್ಯರ ಕುಟುಂಬ ಆಶ್ರಯದಲ್ಲಿ ಹಮ್ಮಿಕೊಂಡ 'ನವ ಜೀವನೋತ್ಸವ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮುಧೋಳ ಸಿದ್ಧಾರೂಢ ಆಶ್ರಮದ ಸಿದ್ದರಾಮ ಶಿವಯೋಗಿಗಳು ಸಾನಿಧ್ಯ ವಹಿಸಿ ಮಾತನಾಡಿ, 'ಕುಡಿತದಿಂದ ಸಾಕಷ್ಟು ಸಮಸ್ಯೆಗಳಿಂದ ಬಳಲಿ ಮತ್ತೆ ಧರ್ಮಸ್ಥಳದ ಮದ್ಯವರ್ಜನ ಶಿಬಿರದಲ್ಲಿ ಪಾಲ್ಗೊಂಡು ಈಗ ನವ ಜೀವನವನ್ನು ಕಟ್ಟಿಕೊಂಡಿದ್ದು ಶ್ಲಾಘನೀಯ. ಸಮಾಜದ ಮಧ್ಯೆ ಜೀವಿಸುತ್ತಿರುವ ಮದ್ಯವ್ಯಸನಿಗಳಿಗೆ ತಾವು ಮಾದರಿಯಾಗಿ, ಅವರನ್ನು ಕೂಡ ಒಳ್ಳೆಯ ನಾಗರಿಕರಾಗಲು ಪ್ರೇರೇಪಿಸಬೇಕು' ಎಂದು ಸಲಹೆ ಮಾಡಿದರು.

ಧರ್ಮಸ್ಥಳ ಸಂಘದ ಶಿರೋಳ ವಲಯದ ಮೇಲ್ವಿಚಾರಕ ಮಂಜುನಾಥ ಕನಕಗಿರಿ, ಸೋಮಲಿಂಗಪ್ಪ ರಾಮದುರ್ಗ, ರಾಘವೇಂದ್ರ ನೀಲನ್ನವರ, ಪಂಡಿತ ಪೂಜಾರಿ, ಭಾರತಿ ರಾಮದುರ್ಗ ಮಾತನಾಡಿದರು. ರುದ್ರಯ್ಯ ಸಾಲಿಮಠ, ಮಲ್ಲಪ್ಪ ಮೆಗಾಡಿ, ಮಲ್ಲಪ್ಪ ಮಲಾವಡಿ, ಸಂಗಪ್ಪ ರಾಮದುರ್ಗ ಇತರರು ಇದ್ದರು.

### ರನ್ನಬೆಳಗಲಿ ಪಟ್ಟಣ ಪಂಚಾಯ್ತಿ ಸಾಮಾನ್ಯ ಸಭೆ

## ಸ್ಥಾಯಿ ಸಮಿತಿ ಚೇರಮನ್‌ರಾಗಿ ಭರಮನಿ ಆಯ್ಕೆ

**ಮಹಾಲಿಂಗಪುರ :** ನೂತನವಾಗಿ ಬಸ್ ನಿಲ್ದಾಣ ನಿರ್ಮಾಣವಾಗುತ್ತಿದ್ದು, ಅದರ ಪಕ್ಕದಲ್ಲೇ ಇಂದಿರಾ ಕ್ಯಾಂಟೀನ್ ಆರಂಭಿಸಲು ರನ್ನಬೆಳಗಲಿ ಪಟ್ಟಣ ಪಂಚಾಯ್ತಿ ಸಭಾಭವನದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ನಿರ್ಧರಿಸಲಾಯಿತು.



ಇಂದಿರಾ ಕ್ಯಾಂಟೀನ್ ನಿರ್ಮಿಸಲು ಸ್ಥಳದ ಪರಿಶೀಲನೆ ಕುರಿತು ನಡೆದ ಚರ್ಚೆಯಲ್ಲಿ ಬಸ್ ನಿಲ್ದಾಣ ಹಿಂದೆ ಸಂತೆ ಮಾರುಕಟ್ಟೆಗಾಗಿ ಎಪಿಎಂಸಿ ಜಾಗೆ ಇದ್ದು, ಅಗತ್ಯವಿರುವಷ್ಟು ಜಾಗೆ ಬಳಕೆ ಮಾಡಿಕೊಂಡು ಇಂದಿರಾ ಕ್ಯಾಂಟಿನ್ ನಿರ್ಮಿಸಲು ಸರ್ವ ಸದಸ್ಯರು ಸರ್ವಾನುಮತದಿಂದ ಒಪ್ಪಿಗೆ ನೀಡಿದರು.

ವಿವಿಧ ಅನುದಾನದಡಿ ಟೆಂಡರ್ ಕರೆದ ಕಾಮಗಾರಿಗಳ ದರ ಮಂಜೂರು ಕುರಿತು ಚರ್ಚಿಸಿ ಅನುಮೋದನೆ ನೀಡಲಾಯಿತು. ವಿವಿಧ ಯೋಜನೆ ಅಡಿ ವಿದ್ಯಾರ್ಥಿ ವೇತನಕ್ಕೆ ಅರ್ಹ ಫಲಾನುಭವಿಗಳ ಆಯ್ಕೆ ಮಾಡಿ ಪಂಚಾಯ್ತಿ ಸೂಚನಾ ಫಲಕದಲ್ಲಿ ದಾಖಲಿಸಲು ಸದಸ್ಯರು ಸೂಚಿಸಿದರು.

ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಸರಿಯಾದ ಚಿಕಿತ್ಸೆ ಹಾಗೂ ಔಷಧಗಳನ್ನು ದೊರಕುತ್ತಿಲ್ಲ. ಇದರಿಂದ ಬಡಜನರಿಗೆ ತುಂಬಾ ತೊಂದರೆಯಾಗಿದೆ. ಆಸ್ಪತ್ರೆ ಸಿಬ್ಬಂದಿಗೆ ಗಮನಹರಿಸಲು ತಿಳಿಸಬೇಕು ಎಂದು ಸದಸ್ಯರು ಸೂಚಿಸಿದರು. ಕ್ರಿಯಾಯೋಜನೆ ಕಾಮಗಾರಿಗಳು, ಲಕ್ಷ್ಮೀ ಲೇಔಟ್ ನಲ್ಲಿ ಹಾಯ್ದು ಹೋಗುವ ರಸ್ತೆಗಳು, ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನ ನೀಡುವ ಕುರಿತು ಚರ್ಚಿಸಲಾಯಿತು.

ಸಭೆಯ ಹಿಂದಿನ ನಡಾವಳಿ ಪ್ರಸ್ತಾಪಿಸದೇ ಇರುವ, ಅಗಸಿ ಕಟ್ಟೆ ಬಿಲ್ ತಡೆ ಹಿಡಿದಿರುವ ಹಾಗೂ 15ನೇ ಹಣಕಾಸು ಯೋಜನೆ ಕಾಮಗಾರಿಗಳ ವರ್ಕ್ ಆರ್ಡರ್ ತಡೆ ಹಿಡಿದಿರುವ ಕುರಿತು ಸದಸ್ಯ ಪ್ರವೀಣ ಪಾಟೀಲ ಪ್ರಶ್ನಿಸಿದರು.

ಸ್ಥಾಯಿ ಸಮಿತಿ ರಚನೆ:

ಪಟ್ಟಣ ಪಂಚಾಯ್ತಿ ಸ್ಥಾಯಿ ಸಮಿತಿ ಚೇರಮನ್‌ರಾಗಿ ಪ್ರವೀಣ ದುಂಡಪ್ಪ ಭರಮನಿ ಅವರನ್ನು ಆಯ್ಕೆ ಮಾಡಲಾಯಿತು. ಸದಸ್ಯರಾಗಿ ಸಿದ್ದುಗೌಡ ಪಾಟೀಲ, ದ್ರಾಕ್ಷಾಯಿಣಿ ಮುರನಾಳ, ಸಾವಿತ್ರಿ ರಾಮದುರ್ಗ, ಭೀಮಪ್ಪ ಹೊಸಮನಿ, ಕರೆಪ್ಪ ಕುಂಬಾಳಿ, ಸದಾಶಿವ ಸಂಕ್ರಟ್ಟಿ, ಕಾಶವ್ವ ಪುರಾಣಿಕ ಆಯ್ಕೆಯಾದರು.

ಪಟ್ಟಣ ಪಂಚಾಯ್ತಿ ಅಧ್ಯಕ್ಷೆ ರೂಪಾ ಸದಾಶಿವ ಹೊಸಟ್ಟಿ ಅಧ್ಯಕ್ಷತೆ ವಹಿಸಿದ್ದರು. ಮುಖ್ಯಾಧಿಕಾರಿ ಎನ್.ಎ.ಲಮಾಣಿ, ಉಪಾಧ್ಯಕ್ಷೆ ಸಹನಾ ಸಿದ್ದು ಸಾಂಗಲಿಕರ ಸೇರಿದಂತೆ ಸರ್ವ ಸದಸ್ಯರು, ಅಧಿಕಾರಿಗಳು ಇದ್ದರು.

# ಅಧ್ಯಯನ ಇಲ್ಲದೆ ಪರಿಶಿಷ್ಟರ ಮೀಸಲಾತಿಯನ್ನು ವರ್ಗೀಕರಿಸಬಾರದು ಎಂದು ಒತ್ತಾಯಿಸಿ ಸಿಎಂಗೆ ಮನವಿ

**ವಿಜಯಪುರ :** ಸರಿಯಾದ ಅಧ್ಯಯನವಿಲ್ಲದೆ ಪರಿಶಿಷ್ಟರ ಮೀಸಲಾತಿಯನ್ನು ವರ್ಗೀಕರಣ ಮಾಡಬಾರದು ಎಂದು ಆಗ್ರಹಿಸಿ ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗೋರ ಸೇನಾ ವತಿಯಿಂದ ಮನವಿ ಸಲ್ಲಿಸಲಾಯಿತು.



ಗೋರ ಸೇನಾ ಜಿಲ್ಲಾಧ್ಯಕ್ಷ ಅರುಣ ನಾಯಕ ಮಾತನಾಡಿ, ಕರ್ನಾಟಕ ರಾಜ್ಯದ ಬಂಜಾರಾ ಸಮುದಾಯಕ್ಕೆ ಮಾರಕವಾಗಿ ಕಾಡುತ್ತಿರುವ ಒಳಮೀಸಲಾತಿ ಮತ್ತು ವರ್ಗೀಕರಣವನ್ನು ವಿರೋಧಿಸಿ, "ಗೋರ್ ಸೇನಾ' ರಾಷ್ಟ್ರೀಯ ಸಂಘಟನೆ, ಕರ್ನಾಟಕ ರಾಜ್ಯ ಘಟಕದಿಂದ ಅ.2 ರಂದು ಬೆಂಗಳೂರಿನ ' ಫ್ರೀಡಂ ಪಾರ್ಕ್ ನಲ್ಲಿ. ರಾಷ್ಟ್ರಪಿತ ' ಮಹಾತ್ಮ ಗಾಂಧಿ ಅವರ 155 ನೇ ಜಯಂತಿಯ ಸಂದರ್ಭದಲ್ಲಿ ಬಾಬಾಸಾಹೇಬ ಡಾ.ಭೀಮರಾವ್ ಅಂಬೇಡ್ಕರ್ ಅವರು ಸಂವಿಧಾನಾತ್ಮಕವಾಗಿ ನೀಡಿರುವ ಮೀಸಲಾತಿಯನ್ನು ಅಸಂವಿಧಾನಾತ್ಮಕ ಮತ್ತು ಅವೈಜ್ಞಾನಿಕವಾಗಿ ವರ್ಗೀಕರಣ ಮಾಡಬಾರದಾಗಿ ಸರ್ಕಾರವನ್ನು ಒತ್ತಾಯಿಸಿ ಒಂದು ದಿನದ ಸತ್ಯಾಗ್ರಹವನ್ನು ಸಾಂಕೇತಿಕವಾಗಿ ಮಾಡಿದ್ದೇವೆ. ಬಂಜಾರಾ ಸಮುದಾಯದ ಜನರ ಶಿಕ್ಷಣ ಮತ್ತು ಉದ್ಯೋಗದಲ್ಲಿ ದೊರಕಿರುವ ಅವಕಾಶಗಳು, ಆರ್ಥಿಕ ಸ್ಥಿತಿಗಳು, ರಾಜಕೀಯ ಸ್ಥಾನಮಾನ ಮತ್ತು ಸಾಮಾಜಿಕ ವ್ಯವಸ್ಥೆಯ ನಿಖರ ಅಂಕಿ ಅಂಶಗಳನ್ನು ಒಳಗೊಂಡ ದತ್ತಾಂಶವನ್ನು ಪ್ರತ್ಯೇಕವಾಗಿ ಪರಿಗಣಿಸಬೇಕು ಎಂದು ಹೇಳಿದರು.

2011ರ ನಂತರ ಜನಗಣತಿ ನಡೆದಿರುವುದಿಲ್ಲ. ಜನಸಂಖ್ಯಾ ಮಾಹಿತಿ ಇಲ್ಲದ ಮತ್ತು ಜಾತಿ ಜನಗಣತಿ ಆಗದೆ ಒಳಮೀಸಲಾತಿ ಮತ್ತು ವರ್ಗೀಕರಣದ ವಿಚಾರ ಅಥವಾ ಪ್ರಯತ್ನ ಸಮಂಜಸವಾಗಿರುವುದಿಲ್ಲ. ಈ ತಪ್ಪನ್ನು ರಾಜ್ಯ ಸರ್ಕಾರ ಮಾಡಕೂಡದು. ಬಂಜಾರಾ ಜನಾಂಗದಲ್ಲಿ 'ಗುಳೆ ಹೋಗುವುದು ' ಒಂದು ಪಿಡಗು ಆಗಿದ್ದು, ರಾಜ್ಯ ಸರ್ಕಾರವು ರಾಜ್ಯದಲ್ಲಿ ಇರುವ ಎಲ್ಲ ಬಂಜಾರಾ ಜನಾಂಗದ ಜನಗಣತಿಯನ್ನು ಅಚ್ಚುಕಟ್ಟಾಗಿ ಮತ್ತು ಅತಿ ಹೆಚ್ಚಿನ ಕಾಳಜಿವಹಿಸಿ ನಡೆಸಬೇಕು ಮತ್ತು ಅದರ ದತ್ತಾಂಶವನ್ನು ಯಾವುದೇ ಲೋಪವಿಲ್ಲದ ಪಾರದರ್ಶಕವಾಗಿ ಬಹಿರಂಗಗೊಳಿಸಬೇಕು ಎಂದರು.

ಮೀಸಲಾತಿ, ಒಳಮೀಸಲಾತಿ ಮತ್ತು ವರ್ಗೀಕರಣದ ಅಧ್ಯಯನ ಪರಿಶಿಷ್ಟರ ನಡುವೆ ಇರುವ ಐಕ್ಯತೆ ಗೆ ಯಾವುದೇ ಧಕ್ಕೆ ತರಬಾರದು. ಎಲ್ಲ ಪರಿಶಿಷ್ಟರ ಹಿತವನ್ನು ಕಾಪಾಡಲು ಸರ್ಕಾರ ಸರಿಯಾದ ಕ್ರಮ ವಹಿಸಬೇಕು. ಪರಿಶಿಷ್ಟ ಸಮುದಾಯಗಳ ನಡುವೆ ಒಳಮೀಸಲಾತಿ ಮತ್ತು ವರ್ಗೀಕರಣದ ವಿಷಯಗಳಲ್ಲಿ ಹುಟ್ಟುತ್ತಿರುವ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಲು ಮತ್ತು ಸಮುದಾಯಗಳ ನಡುವೆ ಯಾವುದೇ ಬೇಧಬಾವ ಹುಟ್ಟದೇ ಇರುವ ಹಾಗೆ ರಾಜ್ಯ ಸರ್ಕಾರ ಸರಿಯಾದ ನಿರ್ಧಾರವನ್ನು ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ವಿನೋದ ರಾಠೋಡ ಇದ್ದರು.

# ಉತ್ತಮ ಆರೋಗ್ಯ ಸೇವೆಗೆ ಬಿ.ಎಲ್.ಡಿ.ಇ ಬಿ.ಎಂ. ಪಾಟೀಲ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮುಂಚೂಣಿ: ಡಾ. ಅರವಿಂದ ಪಾಟೀಲ



**ವಿಜಯಪುರ :** ಜಿಲ್ಲೆಯ ಜನರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸುವಲ್ಲಿ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಆಸ್ಪತ್ರೆ ಮತ್ತು ಶ್ರೀ ಬಿ. ಎಂ. ಪಾಟೀಲ ಸೂಪರ್ ಸ್ಪೇಷಾಲಿಟಿ ಆಸ್ಪತ್ರೆ ಮುಂಚೂಣಿಯಲ್ಲಿವೆ ಎಂದು ಕಾಲೇಜಿನ ಪ್ರಾಚಾರ್ಯ ಡಾ. ಅರವಿಂದ ಪಾಟೀಲ ಹೇಳಿದ್ದಾರೆ. ಶ್ರೀ ಬಿ. ಎಂ. ಪಾಟೀಲ ಸೂಪರ್ ಸ್ಪೇಷಾಲಿಟಿ ಆಸ್ಪತ್ರೆಯಲ್ಲಿ ಸಮಗ್ರ ಆರೋಗ್ಯ ಮತ್ತು ಕ್ಷೇಮ ಚಿಕಿತ್ಸಾಲಯ ಉದ್ಘಾಟನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಆಸ್ಪತ್ರೆಯಲ್ಲಿ ಅತ್ಯಾಧುನಿಕ ಸೌಲಭ್ಯಗಳು ಲಭ್ಯವಿದ್ದು, ನುರಿತ ತಜ್ಞ ವೈದ್ಯರ ಸೇವೆಯೂ ಸಿಗುತ್ತಿದೆ. ಅಲ್ಲದೇ, ವಿಮೆ ಯೋಜನೆಗಳಡಿಯೂ ಚಿಕಿತ್ಸೆಗಳನ್ನು ನೀಡಲಾಗುತ್ತಿದೆ ಎಂದು ಅವರು ಹೇಳಿದರು.

ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ. ವಿಜಯಕುಮಾರ ಕಲ್ಯಾಣಪ್ಪಗೋಳ, ಈ ಚಿಕಿತ್ಸಾಲಯದಲ್ಲಿ ಸೋಮವಾರದಿಂದ ಶನಿವಾರದವರೆಗೆ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಚಿಕಿತ್ಸೆಗಳು ಲಭ್ಯ ಇರಲಿವೆ ಎಂದು ತಿಳಿಸಿದರು.

ಮಧುಮೇಹ, ರಕ್ತದೊತ್ತಡ, ಪಿಸಿಓಎಸ್, ಐಬಿಎಸ್ ಗಾಗಿ ಆಹಾರ ಮತ್ತು ಪೌಷ್ಟಿಕತೆ, ಬೊಜ್ಜಿನ ಸಮಸ್ಯೆ, ತೂಕ ನಿಯಂತ್ರಣ ಚಿಕಿತ್ಸೆ, ವ್ಯಾಯಾಮ ಮತ್ತು ಸಮಾಲೋಚನೆ, ನಿದ್ರೆಯ ಸಮಸ್ಯೆಗಳಿಗೆ ನಿದ್ರಾಚಿಕಿತ್ಸೆ, ಮಾನಸಿಕ ಒತ್ತಡದ ಸಮಸ್ಯೆ, ಒತ್ತಡ ನಿರ್ವಹಣೆ, ತಂಬಾಕು ಸೇವನೆ ಮತ್ತು ಧೂಮಪಾನ, ನಿಕೋಟಿನ್ ಬದಲಾವಣೆ ಚಿಕಿತ್ಸೆ, ಸಮಗ್ರ ಆರೋಗ್ಯ ತಪಾಸಣೆ, ಶಸ್ತ್ರಚಿಕಿತ್ಸೆ ಪೂರ್ವ ಮತ್ತು ಶಸ್ತ್ರಚಿಕಿತ್ಸೆ ನಂತರ ಹೃದಯದ ಪೊ?ಷಣೆ ಚಿಕಿತ್ಸೆ ಮತ್ತು ಸಮಾಲೋಚನೆ ಸೌಲಭ್ಯವನ್ನು ಈ ಚಿಕಿತ್ಸಾಲಯ ಒಳಗೊಂಡಿದೆ ಎಂದು ಅವರು ತಿಳಿಸಿದರು. ಈ ಸಂದರ್ಭದಲ್ಲಿ ಡಾ. ಅನಿತಾ ತೆಲಿ, ಡಾ. ಲತಾ ಮುಳ್ಳೂರ, ಡಾ. ರವಿ ಘಟನಟ್ಟಿ, ಡಾ. ವಿನಯ ಕುಂದರಗಿ, ಡಾ. ಆನಂದ ಅಂಬಲಿ, ಡಾ. ಸಂತೋಷ ಪಾಟೀಲ, ಡಾ. ಸಂಜೀವ ಸಜ್ಜನರ ಮುಂತಾದವರು ಉಪಸ್ಥಿತರಿದ್ದರು.

# ತಾಕತ್ತಿದ್ದರೆ ಸಚಿವ ಜಮೀರ ನನ್ನ ವಿರುದ್ಧ ಚುನಾವಣೆಯಲ್ಲಿ ಗೆದ್ದು ತೋರಿಸಲಿ: ಯತ್ನಾಳ ಸವಾಲ್

**ವಿಜಯಪುರ :** ವಿಜಯಪುರಕ್ಕೆ ಸಾಬರು ಎಂಎಲ್ಎ ಆಗುತ್ತಾರೆ ಎಂದು ಹೇಳುವ ವಕ್ಫ್ ಸಚಿವ ಜಮೀರ್ ಅಹ್ಮದ್ ತಾಕತ್ತು ಇದ್ದರೆ ತಾನೇ ಬಂದು ನನ್ನ ವಿರುದ್ಧ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದು ತೋರಿಸಲಿ ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಸವಾಲು ಹಾಕಿದರು.

ಕಾನೂನು ಬಾಹಿರವಾಗಿ ವಕ್ಫ್ ಆಸ್ತಿ ಎಂದು ನಮೂದಿಸುವ ಪ್ರಯತ್ನ ವಿರೋಧಿಸಿ ಮಂಗಳವಾರ ನಗರದ ಸಿದ್ದೇಶ್ವರ ದೇವಸ್ಥಾನದ ಎದುರು ಹಮ್ಮಿಕೊಂಡ ಬೃಹತ್ ಪ್ರತಿಭಟನಾ ಸಭೆಯಲ್ಲಿ ಅವರು ಮಾತನಾಡಿದರು.

ಅಧಿಕಾರಿಗಳು, ಪೊಲೀಸರು ಸಹ ಹೆದರಬೇಡಿ, ಟ್ರಾನ್ಸಫರ್ ಮಾಡುತ್ತಾರೆ ಹೊರತು ಏನೂ ಮಾಡಲು ಸಾಧ್ಯವಿಲ್ಲ, ಹಿಂದೂ ಸಮಾಜಕ್ಕೆ ಅನ್ಯಾಯವಾದಾಗ ನೀವು ಹೆದರಬೇಡಿ, ಇನ್ನೂ ಎರಡು ವರ್ಷಗಳಲ್ಲಿ ಈ ಸರ್ಕಾರ ಪತನ ನಿಶ್ಚಿತ. ಯಾವ ಪಿಎಸ್ಐ ಗಣಪತಿ ಮೂರ್ತಿಯನ್ನು ಪೊಲೀಸ್ ವ್ಯಾನ್ನಲ್ಲಿ ತೆಗೆದುಕೊಂಡು ಹೋಗಿದ್ದಾನೋ ಅವನ ಮುಂದೆಯೇ ಮೆರವಣಿಗೆ ಕರೆದು-ಕೊಂಡು ಹೋಗೋಣ ಎಂದರು.

ವಕ್ಫ್ ಆಸ್ತಿ ಹೊಡೆದುಕೊಂಡವರಲ್ಲಿ ಮಲ್ಲಿಕಾರ್ಜುನ ಖರ್ಗೆ, ರೆಹಮಾನ್ ಖಾನ್, ಎನ್.ಎ. ಹ್ಯಾರೀಸ್ ಸೇರಿದಂತೆ ಅನೇಕ ಮುಸ್ಲಿಂ ನಾಯಕರು ಶಾಮೀಲಾಗಿದ್ದಾರೆ ಎಂದರು.

ವಕ್ಫ್ ಕಾನೂನಿನ ಕೈ ಕಡಿಯುವ ಕೆಲಸ ವಿಜಯಪುರದಿಂದಲೇ ಆರಂಭವಾಗಲಿ, ಯಾರಾದರೂ ನಿಮ್ಮ ಜಮೀನು ಕಬಳಿಸಲು ಬಂದರೆ ಧೈರ್ಯವಾಗಿ ಎದುರಿಸಬೇಕು ಎಂದರು.

ವಕ್ಫ್ ಅನ್ಯಾಯದ ಬಗ್ಗೆ ಈ ಭಾಗದ ಒಬ್ಬನೇ ಒಬ್ಬ ಕಾಂಗ್ರೆಸ್ ಶಾಸಕ ಮಾತನಾಡುತ್ತಿಲ್ಲ, ಹೀಗಾಗಿ ಈ ಎಲ್ಲರ ಆಸ್ತಿಯನ್ನೇ ವಕ್ಫ್‌ಗೆ ವರ್ಗಾಯಿಸಬೇಕು. ವಕ್ಫ್ ಬಗ್ಗೆ ಮಾತನಾಡಲು ಒಬ್ಬ ಎಂಎಲ್ಎಗೂ ಧಮ್ ಇಲ್ಲವೇ ಎಂದು ಗುಡುಗಿದರು.

ಜಿಲ್ಲಾಧಿಕಾರಿ ಕಚೇರಿ, ಪೊಲೀಸ್ ಕೇಂದ್ರ ಕಚೇರಿ, ಜಿಲ್ಲಾ ಆಸ್ಪತ್ರೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ದೊಡ್ಡ ಜಮೀನನ್ನು ಹಿಂದಿನ ಡಿಸಿ ಮೊಹ್ಮದ್ ಮೊಹಸೀನ್ ವಕ್ಫ್‌ಗೆ ವರ್ಗಾಯಿಸಿದ್ದಾರೆ. ಹಿಂದುಳಿದವರು, ದಲಿತರು, ಬಡವರಿಂದ ಹಿಂದೂತ್ವದ ಹೋರಾಟ ಉಳಿದಿದೆ, ಶ್ರೀಮಂತ ಹಿಂದೂಗಳು ಹೋರಾಟಕ್ಕೆ ಬಾರದಿದ್ದರೂ ಸಹ ಹೋರಾಟಕ್ಕೆ ಶಕ್ತಿ ತುಂಬುವ ಕೆಲಸವನ್ನಾದರೂ ಮಾಡಬೇಕು. ಹಿಂದೂಪರ ಮಾತನಾಡುವ ಎಲ್ಲ ರಾಜಕಾರಣಿಗಳು ಒಂದಾಗಬೇಕು ಎಂದರು.

**ಭಲೋ ಸಾಬರನ್ನು ಬೆಳೆಸಿ :** ಎಂ.ಬಿ. ಪಾಟೀಲ ಸಾಹೇಬರೇ ಭಲೋ ಸಾಹೇಬರನ್ನು ಬೆಳೆಸಿ, ಕೆಟ್ಟ ಹುಳಗಳನ್ನು ಬೆಳೆಸಬೇಡಿ, ರೇಪ್‌ಕೇಸ್ ಮಾಡಿದವರ ಮೇಲೆ ಸರ್ಕಾರಿ ಅಭಿಯೋಜಕರನ್ನಾಗಿ ಮಾಡಿದ್ದೀರಿ. ನನ್ನ ವಿರುದ್ಧ ದಾಖಲೆ ಬಿಡುಗಡೆ ಮಾಡುವೆ ಎಂದು ಹೇಳಿರುವವರು ನಿಜವಾಗಿಯೂ ನನ್ನ ವಿರುದ್ಧ ದಾಖಲೆ ಬಿಡುಗಡೆ ಮಾಡಲಿ ಎಂದು ವಾಗ್ದಾಳಿ ನಡೆಸಿದರು.

ಸಚಿವ ಜಮೀರ್ ಅಹ್ಮದ್ ಎಲ್ಲಿ ಹೋಗುತ್ತಾರೆಯೋ ಅವರ ಹಿಂದೆ ನಾವು ಹೋಗುತ್ತೇವೆ. ಜನರಿಗೆ ಜಾಗೃತಿ ಮೂಡಿಸುತ್ತೇವೆ ಎಂದರು.

# ಚರಂಡಿಗೆ ಬಿದ್ದು ಮಗು ಸಾವು

**ವಿಜಯಪುರ :** ಚರಂಡಿಯಲ್ಲಿ ಬಿದ್ದು ಎರಡು ವರ್ಷದ ಮಗು ಸಾವಿಗೀಡಾದ ಘಟನೆ ನಗರದ ಜೆಎಂ ರಸ್ತೆಯಲ್ಲಿ ನಡೆದಿದೆ. ನಗರದ ಯಾಸೀನ್ ಸದ್ದಾಂ ಮುಲ್ಲಾ (2) ಮೃತ ಬಾಲಕ. ಕೆಲ ದಿನಗಳ ಹಿಂದ ಭಾರೀ ಮಳೆ ಬಿದ್ದಿದಕ್ಕೆ ಚರಂಡಿ ಮೇಲಿನ ಕಲ್ಲು ತೆಗೆಯಲಾಗಿತ್ತು, ಅನಂತರ ಚರಂಡಿ ಮೇಲಿನ ಕಲ್ಲು ಮುಚ್ಚಿರಲಿಲ್ಲ. ಹೀಗಾಗಿ ಮಗು ಆಯ ತಪ್ಪಿ ಚರಂಡಿಗೆ ಬಿದ್ದು ಸಾವನಪ್ಪಿದೆ. ಈ ಅವಘಡಕ್ಕೆ ಮಹಾನಗರ ಪಾಲಿಕೆಯ ನಿರ್ಲಕ್ಷ್ಯವೇ ಕಾರಣ ಎಂದು ಮೃತ ಬಾಲಕನ ಕುಟುಂಬಸ್ಥರು ಆರೋಪಿಸಿದ್ದಾರೆ. ಗೋಳಗುಮ್ಮಟ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

## 6ನೇ ಸುತ್ತಿನ ಕಾಲು ಬಾಯಿ ರೋಗ ಲಸಿಕಾ ಅಭಿಯಾನ: ಜಿಲ್ಲಾ ಮಟ್ಟದ ನಿರ್ವಹಣಾ ಸಮಿತಿ ಸಭೆ

# ಜಾನುವಾರುಗಳಿಗೆ ಕಡ್ಡಾಯ ಲಸಿಕೆ ಹಾಕಿಸಲು ಜಾಗೃತಿ ಮೂಡಿಸಿ: ರಾಹುಲ್ ರತ್ನಂ ಪಾಂಡೆಯ

**ಕೊಪ್ಪಳ :** ಜಾನುವಾರುಗಳಿಗೆ ಕಡ್ಡಾಯ ಲಸಿಕೆ ಹಾಕಿಸಲು ರೈತರಿಗೆ ಹಾಗೂ ಜಾನುವಾರುಗಳ ಮಾಲಿಕರಿಗೆ ಜಾಗೃತಿ ಮೂಡಿಸಲು ಕ್ರಮ ಕೈಗೊಳ್ಳುವಂತೆ ಕೊಪ್ಪಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ ಅವರು ಪಶು ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ (ಎನ್.ಎ.ಡಿ.ಸಿ.ಪಿ) ಕಾರ್ಯಕ್ರಮದಡಿ 6ನೇ ಸುತ್ತಿನ ಕಾಲು ಬಾಯಿ ರೋಗ ಲಸಿಕಾ ಅಭಿಯಾನದ ಪೂರ್ವ ಸಿದ್ಧತೆಗಳ ಪರಿಶೀಲನೆಯ ಕುರಿತು ತಮ್ಮ ಕಚೇರಿಯಲ್ಲಿ ಅಕ್ಟೋಬರ್ 16ರಂದು ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ನಿರ್ವಹಣಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ಅಕ್ಟೋಬರ್ 21 ರಿಂದ ನವೆಂಬರ್ 20ರವರೆಗೆ ನಡೆಯುವ 6ನೇ ಸುತ್ತಿನ ಕಾಲು ಬಾಯಿ ರೋಗ ಲಸಿಕಾ ಅಭಿಯಾನದ ಬಗ್ಗೆ ಜಿಲ್ಲೆಯಾದ್ಯಂತ ವ್ಯಾಪಕವಾಗಿ ಪ್ರಚಾರ ಕೈಗೊಳ್ಳಿ. ಲಸಿಕೆ ಮತ್ತು ಸಿರಿಂಜ್-ನೀಡಲ್ಸ್‌ಗಳ ಶೇಖರಣೆ, ಅಗತ್ಯ ಲಸಿಕಾದಾರರ ನೇಮಕ ಮಾಡಿಕೊಳ್ಳಬೇಕು. ಲಸಿಕಾ ಕಾರ್ಯಕ್ರಮದ ಅವಧಿ ಮತ್ತು ಕಾರ್ಯಕ್ರಮದ ಶೆಡ್ಯೂಲ್ ರಚನೆ ಮಾಡಿಕೊಳ್ಳಬೇಕು. ಗ್ರಾಮ ಪಂಚಾಯತ್‌ವಾರು ಲಭ್ಯವಿರುವ ಪಶು-ಸಖಿಯರ ಮೂಲಕ ಜಾನುವಾರು ಹೊಂದಿರುವ ರೈತರ ಮನೆ ಮನೆ ಭೇಟಿ ಮೂಲಕ ಪ್ರಚಾರ ಕೈಗೊಳ್ಳಬೇಕು ಹಾಗೂ ಲಸಿಕೆ ಹಾಕುವ ಬಗ್ಗೆ ಪಶು-ಸಖಿಯರಿಗೆ ತರಬೇತಿ ನೀಡಬೇಕು. ಗ್ರಾಮಗಳಲ್ಲಿ ಡಂಗುರ ಸಾರಿಸಲು ಕ್ರಮ ಕೈಗೊಳ್ಳಿ. ಪ್ರಚಾರದ ಕ್ರಮವಾಗಿ ಜಿಲ್ಲೆಯ ಎಲ್ಲಾ ಅಂಗನವಾಡಿ, ಶಾಲೆ ಮತ್ತು ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಲಸಿಕಾ ಅಭಿಯಾನದ ಕುರಿತು ಮಾಹಿತಿ, ಜಾಗೃತಿ ಮೂಡಿಸಬೇಕು. ಲಸಿಕಾ ಕಾರ್ಯಕ್ರಮದ ದೈನಂದಿನ ಆನ್‌ಲೈನ್ ವರದಿಯನ್ನು ಪೋರ್ಟಲ್‌ನಲ್ಲಿ ದಾಖಲಿಸಿ. ಜಾನುವಾರುಗಳಿಗೆ ಕಾಲು-ಬಾಯಿ ಲಸಿಕೆ ಹಾಕಲು ಲಸಿಕಾದಾರರಿಗೆ ಪ್ರೋತ್ಸಾಹಧನವನ್ನು ನಿಯಮಾನುಸರ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಉಪನಿರ್ದೇಶಕರಾದ ಡಾ ಪಿ.ಎಂ. ಮಲ್ಲಯ್ಯ ಅವರು ಮಾತನಾಡಿ, ಕಾಲು-ಬಾಯಿ ಜ್ವರ ರೋಗವು ದನ, ಎಮ್ಮೆ, ಹಂದಿ, ಜಿಂಕೆ ಮತ್ತು ಇತರೆ ಸೀಳು ಗೊರಸಿನ ರಾಸುಗಳಲ್ಲಿ ಪಿಕಾರ್ನೋ ವೈರಾಣುವಿನಿಂದ ಉಂಟಾಗುವ ಸಾಂಕ್ರಾಮಿಕ ರೋಗವಾಗಿದೆ. ಈ ರೋಗವು ಅಂಟು ಜಾಡ್ಯವಾಗಿದ್ದು, ರೋಗಗ್ರಸ್ತ ರಾಸುವಿನ ಸಂಪರ್ಕ, ಆಹಾರ, ಗಾಳಿ ಮತ್ತು ನೀರಿನ ಮೂಲಕ ರಾಸುವಿನಿಂದ ರಾಸುವಿಗೆ ಹರಡುತ್ತದೆ. ಕಾಲು-ಬಾಯಿ ಜ್ವರದ ರೋಗೋದ್ರೇಕಗಳಲ್ಲಿ ಕೆಲವೊಮ್ಮೆ ಜಾನುವಾರುಗಳು ಮರಣವನ್ನಪ್ಪುತ್ತವೆ. ರೋಗದಿಂದ ಚೇತರಿಸಿಕೊಂಡ ರಾಸುಗಳು ಉತ್ಪಾದನಾ ಸಾಮರ್ಥ್ಯ ಕಡಿಮೆಯಾಗುವುದಲ್ಲದೆ, ಹಸು-ಎಮ್ಮೆಗಳಲ್ಲಿ ಗರ್ಭಕಟ್ಟುವ ತೊಂದರೆಗಳು ಉಂಟಾಗುತ್ತವೆ. ಗರ್ಭಪಾತ ಉಂಟಾಗುವ ಸಂಭವವಿರುತ್ತದೆ. ಹೋರಿ-ಎತ್ತುಗಳಲ್ಲಿ ಕೆಲಸ ಮಾಡುವ ಸಾಮರ್ಥ್ಯ ಕ್ಷೀಣೀಸುತ್ತದೆ. ಇದರಿಂದ ರೈತರಿಗೆ ಆರ್ಥಿಕ ನಷ್ಟ ಉಂಟಾಗುತ್ತದೆ ಎಂದರು. ಕಾಲು-ಬಾಯಿ ಜ್ವರದ ವಿರುದ್ದ ನಿಯಮಿತವಾಗಿ ಲಸಿಕೆ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಈ ರೋಗವನ್ನು ತಹಬಂದಿಗೆ ತರಬಹುದಾಗಿದ್ದು, ಈ ಹಿನ್ನೆಲೆಯಲ್ಲಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಯೋಜನೆಯಡಿ ರಾಜ್ಯಾದ್ಯಂತ 6ನೇ ಸುತ್ತಿನ ಕಾಲುಬಾಯಿ ರೋಗ ನಿರೋಧಕ ಲಸಿಕಾ ಕಾರ್ಯಕ್ರಮವನ್ನು ಅಕ್ಟೋಬರ್ 21 ರಿಂದ ನವೆಂಬರ್ 20ರವರೆಗೆ (30 ದಿನಗಳು) ಹಮ್ಮಿಕೊಳ್ಳಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ವಾಸ್ತವವಾಗಿ ಲಭ್ಯವಿರುವ 2,69,247 ಜಾನುವಾರುಗಳಿಗೆ (ದನ&ಎಮ್ಮೆಗಳು) ಲಸಿಕೆ ಹಾಕಲು ಗುರಿ ಹೊಂದಲಾಗಿದೆ.

ಜಾನುವಾರುಗಳಿಗೆ ಕಾಲು-ಬಾಯಿ ಲಸಿಕೆ ಹಾಕಲು ಲಸಿಕಾದಾರರಿಗೆ ಇಲಾಖೆಯಿಂದ ಪ್ರತಿ ಜಾನುವಾರಿಗೆ ರೂ.5 ರಂತೆ ಪ್ರೋತ್ಸಾಹಧನ ನಿಗಧಿಪಡಿಸಲಾಗಿದ್ದು, ಕೆ.ಎಂ.ಎಫ್ ವತಿಯಿಂದ ಪ್ರತಿ ಜಾನುವಾರಿಗೆ ರೂ.1.25 ರಂತೆ ಹೆಚ್ಚುವರಿಯಾಗಿ ಪ್ರೋತ್ಸಾಹಧನ ನೀಡಲಾಗುತ್ತದೆ ಎಂದು ಮಾಹಿತಿ ನೀಡಿ-ದರು. ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ ಟಿ.ಲಿಂಗರಾಜು,

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ಗಂಗಪ್ಪ, ಕೆ.ಎಂ.ಎಫ್ ವ್ಯವಸ್ಥಾಪಕರಾದ ಡಾ ಗಂಗಾಧರ ಸೇರಿದಂತೆ ವಿವಿಧ ತಾಲ್ಲೂಗಳ ಪಶು ವೈದ್ಯಾಧಿಕಾರಿಗಳು, ಪಶು ಇಲಾಖೆಯ ಇತರ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

# ರಂಗಸಂಪದ ತಂಡದವರಿಂದ 'ಡಿಯರ್ ಅಜ್ಜೋ' ನಾಟಕ



**ಬೆಳಗಾವಿ :** ನಗರದ ಕೋನವಾಳ ಬೀದಿಯಲ್ಲಿರುವ ಲೋಕಮಾನ್ಯ ರಂಗಮಂದಿರದಲ್ಲಿ ಇದೇ ದಿ. 20 ರವಿವಾರದಂದು ಸಾಯಂಕಾಲ 6-30 ಕ್ಕೆ ನಗರದ ರಂಗಸಂಪದ ತಂಡದವರು ಕಲಾವಕಾಶದವರ ಸಹಕಾರದೊಂದಿಗೆ 'ಡಿಯರ್ ಅಜ್ಜೋ' ಎಂಬ ವಿಭಿನ್ನ ರೀತಿ ನಾಟಕ ಪ್ರದರ್ಶನವನ್ನು ನೀಡಲಿದ್ದಾರೆ.

ಮರಾಠಿಯಲ್ಲಿ ಶ್ರೀಮತಿ ಮಯೂರಿ ದೇಶಮುಖ ನಾಟಕವನ್ನು ರಚಿಸಿದ್ದು ಕನ್ನಡಕ್ಕೆ ಡಾ. ಯಶವಂತ ಸರದೇಶಪಾಂಡೆ ಅನುವಾದಿಸಿದ್ದಾರೆ. ವೈಭವ ಲೋಕೂರ ಅವರು ನಿರ್ದೇಶಿಸಿದ್ದು ಡಾ. ಅರವಿಂದ ಕುಲಕರ್ಣಿ ಮತ್ತು ಕು. ಸ್ನೇಹಾ ಕುಲಕರ್ಣಿ ಬೇರೆ ಬೇರೆ ಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಅಮೇರಿಕಾದಲ್ಲಿ ಹುಟ್ಟಿ ಬೆಳೆದು ಅಪಘಾತದಲ್ಲಿ ಪಾಲಕರನ್ನು ಕಳೆದುಕೊಂಡ ಶಾನೂ ಲಂಡನ್ನಿನಲ್ಲಿ ಚಿಕ್ಕಮ್ಮ ಕಡೆ ಹೊರಟಾಗ ಅನಪೇಕ್ಷಿತವಾಗಿ ಬೆಂಗಳೂರಿನ ಅಜ್ಜನ ಮನೆಯಲ್ಲಿ ಇರಲು ಬರುತ್ತಾಳೆ. ಮುಂದೆ ಶಾನು ಲಂಡನ್ ಗೆ ಮರಳಿ ಹೋಗುವಳೆ? ಶಾನುವಿನ ಇರುವಿಕೆಗೆ ಅಜ್ಜನ ಪ್ರತಿಕ್ರಿಯೆ ಏನು? ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ನೀಡುವ ಕುತುಹಳಭರಿತ ನಾಟಕವೇ 'ಡಿಯರ್ ಅಜ್ಜೋ'

ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಉಪಕುಲಪತಿ ಡಾ. ತ್ಯಾಗರಾಜ ಅವರು ಜಾಗಟೆ ಬಾರಿಸಿ ಚಾಲನೆ ನೀಡಲಿದ್ದಾರೆ. ಕಲಾರಸಿಕರು ಹೆಚ್ಚಿನ ಸಂಖ್ಯೆಯಲ್ಲಿ ಈ ನಾಟಕವನ್ನು ವೀಕ್ಷಿಸಿ ಪ್ರೋತ್ಸಾಹಿಸುವಂತೆ ರಂಗಸಂಪದದ ಕಾರ್ಯದರ್ಶಿ ಪ್ರಸಾದ ಕಾರಜೋಳ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

# ತಂಬಾಕು ಪದಾರ್ಥಗಳ ಮಾರಾಟ ಅಂಗಡಿಗಳ ಮೇಲೆ ದಾಳಿ: ಪ್ರಕರಣ ದಾಖಲು



**ಕೊಪ್ಪಳ :** ಜಿಲ್ಲೆಯ ಕುಷ್ಟಗಿ ಪಟ್ಟಣದ ತಂಬಾಕು ಪದಾರ್ಥಗಳ ಮಾರಾಟ ಅಂಗಡಿಗಳ ಮೇಲೆ ಜಿಲ್ಲಾ ತಂಬಾಕು ತಪಾಸಣಾ ತಂಡವು ಅಕ್ಟೋಬರ್ 14ರಂದು ದಾಳಿ ಮಾಡಿ ಪ್ರಕರಣಗಳನ್ನು ದಾಖಲಿಸಿದೆ. ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ "ತಂಬಾಕು ಮುಕ್ತ ಯುವ ಅಭಿಯಾನ 2.0" ಅಂಗವಾಗಿ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ಪೋಲಿಸ್ ಇಲಾಖೆ, ತಾಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲದ ಅಧಿಕಾರಿಗಳು ಹಾಗೂ ನಗರ ಸಭೆ ಸಿಬ್ಬಂದಿಗಳ ಸಹಯೋಗದಲ್ಲಿ ಕುಷ್ಟಗಿ ತಾಲೂಕಿನಲ್ಲಿ ಕೊಟ್ಟಾ-2003 ಕಾಯ್ದೆಯಡಿಯಲ್ಲಿ ತಂಬಾಕು ಹಾಗೂ ತಂಬಾಕು ಪದಾರ್ಥಗಳನ್ನು ಮಾರಾಟ ಮಾಡುವ ಅಂಗಡಿಗಳ ಮೇಲೆ ದಾಳಿ ನಡೆಸಿ, ಸೆಕ್ಷನ್4ರಡಿಯಲ್ಲಿ 18 ಪ್ರಕರಣಗಳನ್ನು ದಾಖಲಿಸಿ ದಂಡ ವಿಧಿಸಲಾಗಿದೆ ಎಂದು ಜಿಲ್ಲಾ ಸರ್ವೇಕ್ಷಣ ಘಟಕದ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳು ತಿಳಿಸಿದ್ದಾರೆ.

# ಕಿತ್ತೂರು ಉತ್ಸವ-2024ರ ಉತ್ಸವ: ಪುರುಷ ಹಾಗೂ ಮಹಿಳೆಯರಿಗಾಗಿ ವಿವಿಧ ಸ್ಪರ್ಧೆಗಳು

**ಬೆಳಗಾವಿ :** ಪ್ರಸಕ್ತ ಸಾಲಿನ ಕಿತ್ತೂರು ಉತ್ಸವವನ್ನು ಅಕ್ಟೋಬರ್ 23, 24 ಹಾಗೂ 25 ರಂದು ಆಚರಿಸಲಾಗುತ್ತಿದೆ. ಈ ಹಿನ್ನಲೆಯಲ್ಲಿ ಕಿತ್ತೂರಿನಲ್ಲಿ ಪುರುಷ ಹಾಗೂ ಮಹಿಳೆಯರಿಗಾಗಿ ರಾಜ್ಯ ಮಟ್ಟದ ಕಬಡ್ಡಿ, ವಾಲಿಬಾಲ್, ಹಗ್ಗಜಗ್ಗಾಟ ಹಾಗೂ ರಾಷ್ಟ್ರ, ಅಂತರರಷ್ಟ್ರ ಕುಸ್ತಿ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

ಅ.23 ರಂದು ಬೆಳಗ್ಗೆ 10 ಗಂಟೆಗೆ ಕಿತ್ತೂರಿನ ಕಲ್ಮಠ ಶಾಲಾ ಮೈದಾನದಲ್ಲಿ ರಾಜ್ಯ ಮಟ್ಟದ ಕಬಡ್ಡಿ, ವಾಲಿಬಲ್ ಹಾಗೂ ಹಗ್ಗಜಗ್ಗಾಟ ಜರುಗಲಿದೆ. ವಿಜೇತರಿಗೆ ನಗದು ಬಹುಮಾನ, ಟ್ರೋಫಿ ಹಾಗೂ ಪ್ರಮಾಣ ಪತ್ರವನ್ನು ನೀಡಲಾಗುವುದು.

ಅ.25 ರಂದು ಕಿತ್ತೂರಿನ ಕೆಇಬಿ ಗ್ರಿಡ್ ಮೈದಾನದಲ್ಲಿ ರಾಷ್ಟ್ರ-ಅಂತರರಾಷ್ಟ್ರ ಕುಸ್ತಿ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಅ.23 ರಿಂದ 25 ರವರೆಗೆ ಕಿತ್ತೂರಿನ ತುಂಬುಕೆರೆಯಲ್ಲಿ ಜಲಸಾಹಸ ಕ್ರೀಡೆಯನ್ನು ಆಯೋಜಿಸಲಾಗಿದೆ.

ರಾಜ್ಯ ಮಟ್ಟದ ಕಬಡ್ಡಿ, ವಾಲಿಬಾಲ್ ಹಾಗೂ ಹಗ್ಗಜಗ್ಗಾಟ ಸ್ಪರ್ಧೆಯಲ್ಲಿ ಭಾಗವಹಿಸುವ ತಂಡಗಳು ಅ.21 ರೊಳಗಾಗಿ ತಮ್ಮ ತಂಡದ ಹೆಸರನ್ನು ನೋಂದಣಿಯನ್ನು ಮಾಡಿಕೊಳ್ಳಬಹುದಾಗಿದೆ. ಕಬಡ್ಡಿ, ವಾಲಿಬಾಲ್ ಕ್ರೀಡೆಯಲ್ಲಿ ಭಾಗವಹಿಸಲು ಕಡ್ಡಾಯವಾಗಿ ಸಮವಸ್ತ್ರದೊಂದಿಗೆ ಭಾಗವಹಿಸಕದ್ದು.

ಹೆಚ್ಚಿನ ಮಾಹಿತಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖಾ ಉಪನಿರ್ದೇಶಕರ ಕಚೇ-ರಿಯ ದೂರವಾಣಿ:0831-2950306 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಹರ್ಷಿ ವಾಲ್ಮೀಕಿ ಅವರ ಜೀವನವೇ ಒಂದು ಪಾಠ



**ಧಾರವಾಡ** : ಋಷಿ ಮಹರ್ಷಿ, ಮಹಾನ್ ತಪಸ್ವಿ ಮಹರ್ಷಿ ವಾಲ್ಮೀಕಿ ಅವರ ಜೀವನವೇ ಒಂದು ಪಾಠ. ಅವರು ರಾಮಾಯಣ ಮಹಾಕಾವ್ಯವನ್ನು ರಚಿಸುವ ಮೂಲಕ ಪ್ರತಿಯೊಬ್ಬರು ಜೀವನದಲ್ಲಿ ಎದುರಿಸುವ ಪ್ರಸಂಗಗಳನ್ನು ಪಾತ್ರಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ನಿತ್ಯವೂ ಸತ್ಯವಾಗಿರುವ ಜೀವನ ಮೌಲ್ಯಗಳ ಸಂದೇಶಗಳನ್ನು ಮಹಾಕಾವ್ಯದ ಮೂಲಕ ಸಮಾಜಕ್ಕೆ ನೀಡಿದ್ದಾರೆ ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಡಾ.ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಮಹಾನಗರಪಾಲಿಕೆ ಮತ್ತು ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

ತಪ್ಪು ಮಾಡುವುದು ಸಹಜ; ಆದರೆ ಅದರ ಅರಿವು ಮೂಡಿದಾಗ ತಿದ್ದಿಕೊಂಡು ಮತ್ತೇ ತಪ್ಪದಂತೆ ಜೀವನದಲ್ಲಿ ಮುನ್ನಡೆಯಬೇಕು. ಮಹರ್ಷಿ ವಾಲ್ಮೀಕಿ ಅವರ ಜೀವನವನ್ನು ನಾವು ಅವಲೋಕಿಸಿದಾಗ ಇದೇ ಸತ್ಯ ತಿಳಿದು ಬರುತ್ತದೆ. ಒಬ್ಬ ಬೇಟೆಗಾರ ವೃತ್ತಿಯ ವ್ಯಕ್ತಿ ಸತ್ಯದ ಅರಿವಾದಾಗ, ಒಂದು ಮಹಾಕಾವ್ಯವನ್ನು ಬರೆದು, ಮನುಕುಲಕ್ಕೆ ಮಾರ್ಗದರ್ಶಕನಾದ ಮತ್ತು ಋಷಿ ಮಹರ್ಷಿ ಎಂದು ಪ್ರಸಿದ್ಧಿ ಗಳಿಸಿದ ಎಂದು ಅವರು ತಿಳಿಸಿದರು. ವಾಲ್ಮೀಕಿ ಅವರು, ರಾಮಾಯಣವನ್ನು ಕಾವ್ಯರೂಪದಲ್ಲಿ ರಚಿಸಿದ್ದಾರೆ. ಜೀವನಕ್ಕಿಂತ ಯಾವುದು ದೊಡ್ಡದಿಲ್ಲ. ಕೆಟ್ಟದನ್ನು ಮರೆತು ಒಳ್ಳೆಯದನ್ನು ಜೀವನದಲ್ಲಿ ಯಾವಾಗಲೂ ಅಳವಡಿಸಿಕೊಳ್ಳಬೇಕು ಎಂಬುದು ರಾಮಾಯಣ ಮಹಾಕಾವ್ಯದ ತಾತ್ಪರ್ಯವಾಗಿದೆ. ಸಾವಿರಾರು ಶ್ಲೋಕಗಳಿರುವ ಈ ಮಹಾಕಾವ್ಯ ರಚಿಸಿ, ಮಹರ್ಷಿ ವಾಲ್ಮೀಕಿ ಅವರು ಸಮಾಜ ಮಾರ್ಗದರ್ಶಿ ಆದರು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ವಾಲ್ಮೀಕಿ ಅವರ ನೀತಿ ಪಾಠಗಳು ಉತ್ತಮ ಬದುಕು ರೂಪಿಸಲು ಸಹಕಾರಿಯಾಗಿವೆ. ಸಮುದಾಯ ಮತ್ತು ವ್ಯಕ್ತಿಯ ಸಮಗ್ರ ಅಭಿವೃದ್ಧಿಗೆ ಶಿಕ್ಷಣವು ಅತೀ ಪ್ರಮುಖವಾದಂತಹ ಪಾತ್ರವನ್ನು ವಹಿಸುತ್ತದೆ. ಸರಕಾರವು ಪರಿಶಿಷ್ಟರ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಜಾರಿಗೊಳಿಸಿದೆ. ಈ ಯೋಜನೆಗಳ ಸೌಲಭ್ಯಗಳನ್ನು ಪಡೆದುಕೊಳ್ಳುವುದರ ಮೂಲಕ ಎಲ್ಲರೂ ಶಿಕ್ಷಿತರಾಗಬೇಕು. ಸರಕಾರ ಉಚಿತ ಶಿಕ್ಷಣ, ವಸತಿನಿಲಯಗಳ ಸೌಲಭ್ಯ ನೀಡಿದೆ. ಇವುಗಳನ್ನು ಸಮರ್ಪಕವಾಗಿ ಬಳಸಿಕೊಂಡು, ಜೀವನದಲ್ಲಿ ಸಾಧನೆ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಕಾರ್ಯಕ್ರಮದಲ್ಲಿ ಮಹರ್ಷಿ ವಾಲ್ಮೀಕಿ ಸಂಘದ ಜಿಲ್ಲಾಧ್ಯಕ್ಷ ಮನೋಹರ ಗುಡಸಲಮನಿ, ಚಂದ್ರಶೇಖರ ಜುಟ್ಟಲ, ಸುರೇಶ ಗುಂಡನವರ ಅವರು ಮಾತನಾಡಿದರು. ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕಿ ಪಿ.ಶುಭಾ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ರಾಜ್ಯ ಸಂಪನ್ಮೂಲ ಶಿಕ್ಷಕರಾದ ಶಿವಾನಂದ ಇಟಗಿ ಅವರು ಶ್ರೀ ಮಹರ್ಷಿ ವಾಲ್ಮೀಕಿ ಜೀವನ, ಆದರ್ಶಗಳ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಸಾಧಕರಿಗೆ ಸನ್ಮಾನ: ಮಹರ್ಷಿ ವಾಲ್ಮೀಕಿ ಜಯಂತಿ ವೇದಿಕೆ ಕಾರ್ಯಕ್ರಮದಲ್ಲಿ ಎಸ್.ಎಸ್.ಎಲ್.ಸಿ, ಪಿಯುಸಿ ವಾರ್ಷಿಕ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ವೇದಿಕೆಯಲ್ಲಿನ ಗಣ್ಯರು ಸತ್ಕರಿಸಿ, ಗೌರವಿಸಿದರು. ಕಾರ್ಯಕ್ರಮದಲ್ಲಿ ಶಾಲಾ ವಿದ್ಯಾರ್ಥಿಗಳು ಮಹಾಕಾವ್ಯದ ಪ್ರಸಂಗವನ್ನು ದೊಡ್ಡಾಟದ ಮೂಲಕ ಪ್ರಸ್ತುತ ಪಡಿಸಿದರು.

ಮುಖ್ಯ ಅತಿಥಿಗಳಾಗಿ ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶಾಕೀರ ಸನದಿ, ಜಿಲ್ಲಾ ಪೊಲೀಸ ಅಧೀಕ್ಷಕ ಡಾ.ಗೋಪಾಲ ಬ್ಯಾಕೋಡ, ತಹಶಿಲ್ದಾರ ಡಿ.ಎಚ್.ಹೂಗಾರ, ಡಿಡಿಪಿಐ ಎಸ್.ಎಸ್.ಕೆಳದಿಮಠ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಜಿಲ್ಲಾ ಜಾಗೃತಿ ಸಮಿತಿ ಸದಸ್ಯರು, ಸಫಾಯಿ ಕರ್ಮಚಾರಿಗಳ ಜಿಲ್ಲಾ ಸಮಿತಿ ಸದಸ್ಯರು, ವಿವಿಧ ಸಮಾಜ ಮುಖಂಡರಾದ ಕಲ್ಮೇಶ ಹಾವೇರಿಪೇಟ, ಪರಮೇಶ್ವರ ಕಟ್ಟಿಮನಿ, ಲಕ್ಷ್ಮಣ ಬಕ್ಕಾಯಿ, ಫಕೀರಪ್ಪ ಯಾದವಾಡ ಸೇರಿದಂತೆ ವಾಲ್ಮೀಕಿ ಸಮಾಜದ ಮುಖಂಡರು ವೇದಿಕೆಯಲ್ಲಿದ್ದರು. ಕಾರ್ಯಕ್ರಮದಲ್ಲಿ ಗಣ್ಯರು, ವಿವಿಧ ಇಲಾಖೆಗಳ ಅಧಿಕಾರಿಗಳು, ಸಾರ್ವಜನಿಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಆನಂದ ಹಿರೇಲಿಂಗಪ್ಪನವರ ಅತಿಥಿಗಳನ್ನು ಸ್ವಾಗತಿಸಿದರು. ಪ್ರವೀಣ ಮಸಾಗಿ ಕಾರ್ಯಕ್ರಮ ನಿರೂಪಿಸಿದರು. ತಾಲೂಕಾ ಸಹಾಯಕ ನಿರ್ದೇಶಕಿ ಎಂ.ಬಿ.ಸಣ್ಣೇರ ಅವರು ವಂದಿಸಿದರು.

ಮಹರ್ಷಿ ವಾಲ್ಮೀಕಿ ಭಾವಚಿತ್ರದ ಭವ್ಯ ಮೆರವಣಿಗೆ: ಮಹರ್ಷಿ ವಾಲ್ಮೀಕಿ ಜಯಂತಿ ಪ್ರಯುಕ್ತ ಜರುಗಿದ ಮೆರವಣಿಗೆಗೆ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಚಾಲನೆ ನೀಡಿದರು. ಮಹರ್ಷಿ ವಾಲ್ಮಿಕಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಹಾಗೂ ಗೌರವ ಸಮರ್ಪಣೆ ಸಲ್ಲಿಸುವ ಮೂಲಕ ಪ್ರಾರಂಭವಾದ ಮೆರವಣಿಗೆಯು ಜಿಟಿಜಿಟಿ ಮಳೆಯ ನಡುವೆಯೂ ಅದ್ದೂರಿಯಾಗಿ, ಉತ್ಸಹದಿಂದ ನಗರದ ಪ್ರಮುಖ ಬಡಾವಣೆ ಮತ್ತು ರಸ್ತೆಗಳಲ್ಲಿ ಸಂಚರಿಸಿ, ಆಲೂರು ವೇಂಕಟರಾವ್ ವೃತ್ತದ ಮೂಲಕ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಾಂಗಣಕ್ಕೆ ಬಂದು ಮುಕ್ತಾಯಗೊಂಡಿತು. ಮೆರವಣಿಗೆಯಲ್ಲಿ ಪೂರ್ಣ ಕುಂಬ ಹೊತ್ತ ಮಹಿಳೆಯರು ಹಾಗೂ ವಿವಿಧ ಜಾನಪದ ಕಲಾತಂಡಗಳು ಭಾಗವಹಿಸಿದ್ದವು.

# ರಾಮಾಯಣ ಇಂದಿಗೂ ಶ್ರೇಷ್ಠ ಮಹಾಗ್ರಂಥ



**ನವಲಗುಂದ** : ಆದಿಕವಿ ಮಹರ್ಷಿ ವಾಲ್ಮೀಕಿಯವರು ಬರೆದ ರಾಮಾಯಣ ಇಂದಿಗೂ ಶ್ರೇಷ್ಠ ಗ್ರಂಥವಾಗಿದೆ ಎಂದು ಉತ್ತರ ಕರ್ನಾಟಕ ಪರಿವರ್ತನ ಸಮುದಾಯದ ಅಧ್ಯಕ್ಷ ಮಾಬುಸಾಬ ಯರಗುಪ್ಪಿ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಸಂಘದ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು ವಾಲ್ಮೀಕಿಯವರ ಆರಂಭಿಕ ಜೀವನವು ರತ್ನಾಕರ ಎಂಬ ಹೆದ್ದಾರಿ ಡಕಾಯಿತದಿಂದ ಆರಂಭವಾಗಿ, ಋಷಿ ನಾರದ ಮುನಿಯಿಂದ ಭಗವಾನ್ ರಾಮನ ಮಹಾನ್ ಭಕ್ತನಾಗಿ ರೂಪಾಂತರಗೊಂಡು ರಾಮಾಯಣ ಗ್ರಂಥ ರಚನೆ ಮಾಡಿದ್ದು ಇತಿಹಾಸದಲ್ಲಿ ಅಜರಾಮರವಾಗಿ ಉಳಿದಿದೆ ಎಂದರು.

ಸಂಘದ ಉಪಾಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ ಮಠಪತಿ ಮಾತನಾಡಿ ಪೌರಾಣಿಕ ಭಾರತೀಯ ಮಹಾಕಾವ್ಯ ರಾಮಾಯಣ ಬರೆದ ಕೀರ್ತಿಗೆ ಪಾತ್ರರಾದ ವಾಲ್ಮೀಕಿ ಋಷಿಯ ಜನ್ಮದಿನವನ್ನು ವಾಲ್ಮೀಕಿ ಜಯಂತಿ ಎಂದು ಸ್ಮರಿಸಲಾಗುತ್ತದೆ. ಹಿಂದೂ ಸಂಪ್ರದಾಯದಲ್ಲಿ, ವಾಲ್ಮೀಕಿ ಮಹರ್ಷಿಯನ್ನು ಶ್ರೇಷ್ಠ ಕವಿಗಳು ಮತ್ತು ಋಷಿಗಳಲ್ಲಿ ಒಬ್ಬರು ಎಂದು ಪೂಜಿಸಲಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಕಳ್ಳಿಮಠ ಓಣಿಯ ನಿವಾಸಿ ಮೌಲಾಸಾಬ ಒಂಟಿ, ಮಾಬುಸಾಬ ಒಂಟಿ ಹಾಗೂ ಟಿಪ್ಪುಸುಲ್ತಾನ್ ಒಂಟಿಯವರ ಸಾಮಾಜಿಕ ಕಾಳಜಿ ಮೆಚ್ಚಿ ಸಂಘದಿಂದ ಸನ್ಮಾನಿಸಲಾಯಿತು. ಮಹಮ್ಮದ ತಾಜುದ್ದೀನ್ ಹುನಗುಂದ, ಬಾಬುಶ್ಯಾ ಮಕಾಂದಾರ, ಅಕ್ಬರ ಮುಲ್ಲಾ, ಪವನ ಕದಂ ಉಪಸ್ಥಿತರಿದ್ದರು.

# ದೇವಸ್ಥಾನದ ಮೇಲ್ಛಾವಣಿ ಕುಸಿತ

**ನವಲಗುಂದ** : ತಾಲ್ಲೂಕಿನ ಮೊರಬ ಗ್ರಾಮದ ಆರಾಧ್ಯ ದೈವವೆಂದೇ ಕರೆಯಲ್ಪಡುವ ಶ್ರೀ ಯೋಗೇಶ್ವರ ದೇವಸ್ಥಾನ ಗರ್ಭಗುಡಿ ಹಿಂಭಾಗದಲ್ಲಿ ಇರುವ ಮೇಲ್ಛಾವಣಿ ದಿಢೀರ ಕುಸಿದಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಮಳೆ ನೀರು ದೇವಸ್ಥಾನ ಒಳ ಪ್ರವೇಶಿಸುತ್ತಿದೆ.

ಈ ಭಾಗದ ಪುರಾತನ ಹಿನ್ನಲೆಯುಳ್ಳ ಶ್ರೀ ಯೋಗೇಶ್ವರ ದೇವಸ್ಥಾನವು ತನ್ನದೇ ಆದ ವಿಶೇಷತೆಯನ್ನು ಹೊಂದಿದ್ದಲ್ಲದೆ ಅಪಾರ ಸಂಖ್ಯೆಯಲ್ಲಿ ಭಕ್ತಸಾಗರವನ್ನು ಹೊಂದಿದೆ. ದೇವಸ್ಥಾನದ ದುರಸ್ತಿ ಕಾರ್ಯ ಆದಷ್ಟು ಬೇಗನೆ ಆಗಲಿ ಎಂಬುದು ಭಕ್ತಾದಿಗಳ ಕೋರಿಕೆಯಾಗಿದೆ.

ದೇವಸ್ಥಾನ ಮೇಲ್ಛಾವಣಿ ಕುಸಿತ ಸುದ್ದಿ ತಿಳಿಯುತ್ತಿದ್ದಂತೆಯೇ ಕಂದಾಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಕುರಿತು ಮೇಲಾಧಿಕಾರಿಗಳಿಗೆ ವರದಿ ನೀಡುವುದಾಗಿ ತಿಳಿಸಿ ಅದೇ ರೀತಿ ಭಕ್ತಾದಿಗಳಿಗೆ ಯಾವುದೇ ರೀತಿಯಲ್ಲಿ ತೊಂದರೆ ಆಗದಂತೆ ಎಚ್ಚರ ವಹಿಸಲಾಗುವುದು ಎಂದು ತಿಳಿಸಿದ್ದಾರೆ.



ಇನ್ನೂ ಸತತವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಹಲವು ಕಡೆ ಹಳ್ಳ ಕೊಳ್ಳಗಳು ತುಂಬಿ ಹರಿದಿವೆ. ಅನೇಕ ಮನೆಗಳಿಗೆ ಹಾನಿಗೊಳಗಾಗಿವೆ.

# ಹೈಕಮಾಂಡ್ ಜವಾಬ್ದಾರಿ ವಹಿಸಿದರೆ ಮಹಾರಾಷ್ಟ್ರಕ್ಕೆ ಪ್ರಚಾರಕ್ಕೆ ಹೋಗುವೆ

**ಅಥಣಿ :** ಪಕ್ಷದ ಹೈಕಮಾಂಡ್ ಜವಾಬ್ದಾರಿ ವಹಿಸಿದರೆ ನೆರೆಯ ಮಹಾರಾಷ್ಟ್ರ ರಾಜ್ಯದ ವಿಧಾನಸಭೆ ಚುನಾವಣೆಯ ಪ್ರಚಾರಕ್ಕೆ ಹೋಗುತ್ತೇನೆ ಪಕ್ಷದ ಹೈಕಮಾಂಡ್ ತಿರ್ಮಾನ ಮಾಡಬೇಕು ಎಷ್ಟೇ ಎಂದು ಮಾಜಿ ಉಪ ಮುಖ್ಯಮಂತ್ರಿ ಹಾಗೂ ಶಾಸಕ ಲಕ್ಷ್ಮಣ ಸವದಿ ಹೇಳಿದರು. ಅವರು ವಾಲ್ಮೀಕಿ ಜಯಂತಿ ಕಾರ್ಯಕ್ರಮದ ನಂತರ ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು ನಾನು ಈಗಾಗಲೇ ನಾನು ವಿಧಾನಸಭಾ ಚುನಾವಣೆ. ಲೋಕಸಭಾ ಚುನಾವಣೆಯ ಉಸ್ತುವಾರಿ ನೀಡಿದ್ದರಿಂದ ಪ್ರಚಾರಕ್ಕೆ ಹೋಗಿದ್ದೆ. ರಾಜ್ಯದಲ್ಲಿ ನಡೆಯುತ್ತಿರುವ 3 ವಿಧಾನಸಭಾ ಕ್ಷೇತ್ರದ ಉಪ–ಚುನಾವಣೆಯ ಪ್ರಚಾರದ ಉಸ್ತುವಾರಿ ನೀಡಿದರೆ ಅಲ್ಲಿಗೆ ಹೋಗುವೆ. ನೆರೆಯಮಹಾರಾಷ್ಟ್ರಕ್ಕೆಹೋಗುಅಂದರೆಅಲ್ಲಿಗೆನಾನು ಹೋಗುತ್ತೇನೆ ಎಂದರು. ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಬದಲಾವಣೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅದಕ್ಕಾಗಿ ಸಿಎಂ ಬದಲಾವಣೆ ಚರ್ಚೆ ಅನಾವಶ್ಯಕ ಎಂದ ಅವರು ರಾಜ್ಯದಲ್ಲಿ ದಲಿತ ಮುಖ್ಯ ಮಂತ್ರಿ ಎಂಬ ಕೂಗಿನ ಬಗ್ಗೆ ಪ್ರಶ್ನೆ ಕೇಳಿದಾಗ ಈ ದೇಶದಲ್ಲಿ ಯಾರೂ ಬೇಕಾದರೂ ಮುಖ್ಯಮಂತ್ರಿಗಳಾಗಬಹುದು ನಮ್ಮ ಸಂವಿಧಾನವು ಎಲ್ಲರಿಗೂ ಹಕ್ಕು ನೀಡಿದೆ ಎಂದು ಹೇಳಿದರು.

# ಗತಿಬಿಂಬ | ಭ್ರಷ್ಟಾಚಾರದ ಸಿಡಿಲು ಬಡಿದೊಡೆ

## ಕರ್ನಾಟಕದ ಮಾನಸಿಕ ಆರೋಗ್ಯಕ್ಕೆ ಆಘಾತ ತಂದ ಹಗರಣಗಳ ಸರಮಾಲೆ

ಲೋಕಸಭೆ ಚುನಾವಣೆ ಮುಗಿದ ತರುವಾಯ ರಾಜ್ಯದಲ್ಲಿ ಭ್ರಷ್ಟಾಚಾರ, ಸ್ವಜನಪಕ್ಷಪಾತದ ವಿಚಾರಗಳೇ ಹೆಚ್ಚು ಸದ್ದು ಮಾಡುತ್ತಿದ್ದು, ದೇಶದ ಗಮನವನ್ನೂ ಸೆಳೆದಿವೆ. 'ಹೇಳುವುದು ಆಚಾರ, ಮಾಡುವುದು ಅನಾಚಾರ, ಬೀದಿಗೆ ಬಂದು ನಿಂತಿದೆ ಎಲ್ಲರ ಭ್ರಷ್ಟಾಚಾರ' ಎಂದು ಸರಳ ವಾಕ್ಯದಲ್ಲಿ ಹೇಳಿಬಿಡಬಹುದಾದ ಪರಿಸ್ಥಿತಿಯನ್ನು ರಾಜಕಾರಣಿಗಳು ತಂದುಕೊಂಡಿದ್ದಾರೆ.

ಹಿಂದಿನ ನಾಲ್ಕೈದು ತಿಂಗಳಿನಲ್ಲಿ ಅಭಿವೃದ್ಧಿ, ಕೈಗಾರಿಕಾ ಬೆಳವಣಿಗೆ, ಬಡವರ ಕಲ್ಯಾಣ, ಶಿಕ್ಷಣ?ಆರೋಗ್ಯ?ಜನಜೀವನ ಸುಧಾರಣೆಗೆ ಒತ್ತು ಎಂಬಂತಹ ಯಾವ ಪದಗಳೂ ಕೇಳಿಸುತ್ತಲೇ ಇಲ್ಲ. ಬರ?ನೆರೆ ತಂದಿತ್ತ ಅನಾಹುತವು ಯಾವ ರಾಜಕೀಯ ಪಕ್ಷದವರಿಗೂ ಕಾಳಜಿಯ ಸಂಗತಿಯೇ ಆಗಿಲ್ಲ. ಅವರ ಮೇಲೆ ಇವರು ಕಲ್ಲೆಸೆಯುವುದು, ಇವರ ಮೇಲೆ ಅವರು ಕೆಸರು ಎರಚುವುದು? ಇದನ್ನು ಕಂಡು ಜನ ಆಡಿಕೊಳ್ಳುವುದು... ಇಷ್ಟಕ್ಕೇ ಸೀಮಿತವಾಗಿದೆ ರಾಜ್ಯದ ರಾಜಕೀಯ ಬೆಳವಣಿಗೆ. ಒಂದು ಕಾಲದಲ್ಲಿ ಮೌಲ್ಯಾಧಾರಿತ ರಾಜಕಾರಣ, ಜನಕಲ್ಯಾಣ ಎಂಬುದನ್ನು ಮಾತಿನಲ್ಲಾದರೂ ಉಳಿಸಿ ಕೊಂಡ ರಾಜ್ಯವಾಗಿ ಕರ್ನಾಟಕವು ದೇಶದಲ್ಲೇ ಪರಿಗಣಿತ ವಾಗಿತ್ತು. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಎರಡನೇ ಬಾರಿ ಅಧಿಕಾರ ವಹಿಸಿಕೊಂಡಾಗ, ಪಂಚ ಗ್ಯಾರಂಟಿಗಳ ಅನುಷ್ಠಾನದಿಂದಾಗಿ ಕಲ್ಯಾಣದ ಕನಸುಗಳು ಗರಿಗೆದರಿದವು. ಆರ್ಥಿಕ ಹಿಂಜರಿತ, ಬರದಿಂದ ಕಂಗೆಟ್ಟ ಜನರಲ್ಲಿ ಹೊಸ ಕಸುವು ತುಂಬಲು ಗ್ಯಾರಂಟಿಗಳು ತಾಯಿಬೇರಾಗಿದ್ದವು. ಹೀಗೆ ಹೊಸ ದಿಕ್ಕಿನತ್ತ ಚಲಿಸಹೊರಟಿತ್ತು ಕರ್ನಾಟಕ.

ಲೋಕಸಭೆ ಚುನಾವಣೆ ಫಲಿತಾಂಶದ ಬಳಿಕ ಹೊರಬಂದ ಹೀನಾತಿಹೀನ ಲೈಂಗಿಕ ಹಗರಣಗಳು, ಭ್ರಷ್ಟಾಚಾರದ ಆರೋಪಗಳು ಕರ್ನಾಟಕದ ಮಾನಸಿಕ ಆರೋಗ್ಯಕ್ಕೆ ಕೊಳ್ಳಿ ಇಟ್ಟವು. ಕಲ್ಯಾಣದ ಹೊಂಗನಸುಗಳನ್ನು ಒಂದರ್ಥದಲ್ಲಿ ಹೊಸಕಿ ಹಾಕಿದವು.

ದೇಶಕ್ಕೆ ಪ್ರಧಾನಿಯಾಗಿ ಎಚ್.ಡಿ. ದೇವೇಗೌಡರನ್ನು ಕೊಟ್ಟ ರಾಜಕೀಯ ಕುಟುಂಬದ ಕುಡಿಗಳಿಬ್ಬರ ಲೈಂಗಿಕ ಹಗರಣಗಳು ಸಾರ್ವಜನಿಕ ಜೀವನದಲ್ಲಿ ನೈತಿಕತೆ ಕುಸಿದಿರುವುದನ್ನು ಬಿಂಬಿಸಿದವು. ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ಬಿ.ಎಸ್.ಯಡಿಯೂರಪ್ಪ



ಅವರ ವಿರುದ್ಧ ಎಫ್‌ಐಆರ್ ದಾಖಲಾಯಿತು. ಬಿಜೆಪಿ ಶಾಸಕ ಮುನಿರತ್ನ ಪ್ರಕರಣವಂತೂ 'ವಿಷಕನ್ಯೆ'ಯರನ್ನು ರಾಜಕೀಯ ದುರುದ್ದೇಶಕ್ಕೆ ಬಳಸಿಕೊಳ್ಳುತ್ತಿದ್ದ ಪುರಾಣದ ಕತೆಗಳನ್ನು ನೆನಪಿಸಿದವು. ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಅವರ ವಿರುದ್ಧವೂ ಅತ್ಯಾಚಾರದ ಆರೋಪದಡಿ ಪ್ರಕರಣ ದಾಖಲಾಯಿತು.

ವಾಲ್ಮೀಕಿ ಅಭಿವೃದ್ಧಿ ನಿಗಮ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಹಗರಣಗಳು ಹೊರ ಬಂದವು. ನಿಗಮದಲ್ಲಿ ನಡೆದ ಅಕ್ರಮದ ಕಾರಣಕ್ಕೆ ಬಿ.ನಾಗೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟು, ಜೈಲಿಗೆ ಹೋದರು. ಮುಡಾ ಪ್ರಕರಣ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸುತ್ತಲೇ ಗಿರಕಿ ಹೊಡೆಯುತ್ತಿದೆ. ಅವರ ವಿರುದ್ಧ ವಿರೋಧ ಪಕ್ಷಗಳು 'ಮುಡಾಸ್ತ್ರ' ಬಳಸುತ್ತಿದ್ದಂತೆ, ಹುತ್ತದಲ್ಲಿ ಅಡಗಿದ್ದ ಒಂದೊಂದೇ ಪ್ರಕರಣ ಬೀದಿಗೆ ಬರತೊಡಗಿತು. ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಯಡಿಯೂರಪ್ಪ ಕುಟುಂಬ, ಕೋವಿಡ್ ಹಗರಣಗಳನ್ನೆಲ್ಲ ಬೀದಿಗೆ ತಂದು ನಿಲ್ಲಿಸಲಾಯಿತು. ಸಿದ್ದರಾಮಯ್ಯ ಅವರನ್ನು ಬೀದಿಗೆ ತಂದು ನಿಲ್ಲಿಸಬೇಕೆಂಬ ಕುಮಾರಸ್ವಾಮಿ ಅವರ ಹಟ, ಎಲ್ಲರನ್ನೂ ನಡುಬೀದಿಗೆ ತಳ್ಳಿತು.

ಭ್ರಷ್ಟಾಚಾರದ ಪ್ರಕರಣಗಳೆಲ್ಲ ಹೀಗೆ ಏಕಾಏಕಿ ಒಂದೇ ವರ್ಷದಲ್ಲಿ ಹೊರಬಂದಿವೆ. ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೊದ ಈ ವರ್ಷದ ವರದಿಯಲ್ಲಿ 'ಕರ್ನಾಟಕ ಭ್ರಷ್ಟಾಚಾರದಲ್ಲಿ ನಂ.1' ಎಂದು ದಾಖಲಾದರೂ ಅಚ್ಚರಿ ಇಲ್ಲ! ಹಾಗೆಂದು, ರಾಜ್ಯದಲ್ಲಿ ಹಿಂದೆಂದೂ ಭ್ರಷ್ಟಾಚಾರ ಇರಲೇ ಇಲ್ಲವೆಂದಲ್ಲ. ಮುಖ್ಯಮಂತ್ರಿಯಾದ ಬಹುತೇಕರು ಇಂತಹ ಆರೋಪಗಳ ಸುಳಿಯಲ್ಲಿ ಮುಳುಗಿ ಎದ್ದವರೇ. ಆದರೆ ಬಂದ ದುಡ್ಡೆಲ್ಲವೂ ತನ್ನ ಮನೆಯ ತಿಜೋರಿಯನ್ನೇ ಸೇರಬೇಕು ಎಂಬ ಪದ್ಧತಿ ಇಟ್ಟುಕೊಂಡವರಲ್ಲ.

ಮುಖ್ಯಮಂತ್ರಿಯಾಗಿದ್ದ ಡಿ. ದೇವರಾಜ ಅರಸು ಅವರ ಒಡನಾಡಿಯಾಗಿದ್ದ ಡಿ.ಬಿ. ಚಂದ್ರೇಗೌಡರು ಹೇಳಿದ ಕತೆಯೊಂದು ಹೀಗಿದೆ: ಬಾಲಬ್ರೂಯಿಯಲ್ಲಿ ವಾಸಿಸುತ್ತಿದ್ದ ಅರಸು ಅವರನ್ನು ಒಮ್ಮೆ ಚಂದ್ರೇಗೌಡರು ಕಾಣಲು ಹೋಗಿದ್ದರು. ಅಲ್ಪಸಂಖ್ಯಾತ ಸಮುದಾಯದ ಒಬ್ಬ ಯುವಕ, ಅರಸು ಭೇಟಿಗಾಗಿ ಕಾಯುತ್ತಾ ಕುಳಿತಿದ್ದರು. ಎಷ್ಟು ಹೊತ್ತಾದರೂ ಅರಸು ಅವರು ಭೇಟಿಗೆ ಅವಕಾಶ ಕೊಟ್ಟಿರಲಿಲ್ಲ. ಚಂದ್ರೇಗೌಡರನ್ನು ಕಂಡ ಕೂಡಲೇ, ಹೇಗಾದರೂ ಭೇಟಿ ಮಾಡಿಸಿ ಎಂದು ಆ ಯುವಕ ದುಂಬಾಲು ಬಿದ್ದರು. ಗೌಡರು ಇದನ್ನು ತಿಳಿಸಿದಾಗ, 'ಅವನಿಗೆ ದುಡ್ಡು ಬೇಕಷ್ಟೆ, ಕಾಯಲಿ ಬಿಡು' ಎಂದು ಅರಸು ಹೇಳಿದರು. ಗೌಡರ ಒತ್ತಾಯದ ಮೇರೆಗೆ ಯುವಕನನ್ನು ಕರೆಸಿಕೊಂಡ ಅರಸು, ತಮ್ಮ ಆಪ್ತ ನಟರಾಜನನ್ನು ಕರೆದು, 'ಆ ಎರಡು ಬ್ಯಾಗ್ ತಂದುಕೊಡು' ಎಂದು ಆಜ್ಞಾಪಿಸಿದರು. ಆ ಯುವಕನಿಗೆ ಕೊಟ್ಟ ಬ್ಯಾಗ್‌ನಲ್ಲಿ ಎಷ್ಟು ಹಣವಿತ್ತೋ ಗೊತ್ತಿಲ್ಲ. 'ಮತ್ತೆ ಆರು ತಿಂಗಳು ಬರಬೇಡ' ಎಂದು ಗದರಿದ ಅರಸು ಆತನನ್ನು ಕಳುಹಿಸಿದ್ದರು. ಇಷ್ಟು ಉದಾರಿಯಾಗಿದ್ದ ಅರಸು ಅವರಿಗೆ ಅವರ ಜತೆಗಿದ್ದವರೆಲ್ಲ 'ನೀವು ಹೇಳಿದರೆ ಹಾಳುಬಾವಿಗೆ ಬೇಕಾದರೂ ಹಾರುತ್ತೇವೆ' ಎಂದು ಹೇಳುತ್ತಿದ್ದರು. ಆದರೆ ಅರಸು ಸ್ವತಃ ಕಷ್ಟಕ್ಕೆ ಸಿಲುಕಿ 'ಬಾವಿಗೆ ಬೀಳುವಂತಹ' ಸನ್ನಿವೇಶ ಎದುರಾದಾಗ, ಅವರೆಲ್ಲ ಬಾವಿಕಟ್ಟೆ ಮೇಲೆ ನಿಂತು ಗಹಗಹಿಸಿ ನಗುತ್ತಿದ್ದರು.

ರಾಮಕೃಷ್ಣ ಹೆಗಡೆ ನೇತೃತ್ವದ ಸರ್ಕಾರದಲ್ಲಿ ಅಬಕಾರಿ ಸಚಿವರಾಗಿ ಜೆ.ಎಚ್.ಪಟೇಲ್ ಅಧಿಕಾರ ಸ್ವೀಕರಿಸಿದ್ದರು. ಮೊದಲ ದಿನವೇ ಅವರನ್ನು ಭೇಟಿಯಾದ ಅಬಕಾರಿ ಕುಳಗಳು, 'ಇದನ್ನು ಒಪ್ಪಿಸಿಕೊಳ್ಳಿ' ಎಂದು ದೊಡ್ಡ ಸೂಟ್‌ಕೇಸ್ ಒಂದನ್ನು ಮುಂದಕ್ಕೆ ತಳ್ಳಿದರು. 'ಏನಿದು?' ಎಂದು ಪಟೇಲರು ಕೇಳಿದಾಗ, 'ಇಲಾಖೆ ಸಚಿವರಿಗೆ ಕೊಡುವ ಮಾಮೂಲು' ಎಂದರು. ಸಿಟ್ಟಿಗೆದ್ದ ಪಟೇಲರು ಸೂಟ್‌ಕೇಸನ್ನು ಝಾಡಿಸಿ ಒದ್ದಿದ್ದರು. ಇದು ಪಟೇಲರೇ ಹೇಳಿದ್ದ ಕತೆ.

'ಸುಮ್ಮನೆ ಕುಳಿತಿದ್ದರೂ ತಿಂಗಳಿಗೆ ಕನಿಷ್ಠ ? 100 ಕೋಟಿ ಬರುತ್ತದೆ. ಸ್ವಲ್ಪ ದಬಾಯಿಸಿ, ಬಡಿಗೆ ಹಿಡಿದರೆ ಬರುವ ಹಣಕ್ಕೆ ಲೆಕ್ಕವೇ ಇರುವುದಿಲ್ಲ. ಹೀಗಿರುವಾಗ ಇನ್ನಷ್ಟು ಹೆಚ್ಚು ದುಡ್ಡು ಏಕೆ ಬೇಕು' ಎಂದು ಮುಖ್ಯಮಂತ್ರಿ ಆಗಿದ್ದವರೊಬ್ಬರು ಹೇಳುತ್ತಿದ್ದುದು ಉಂಟು. ಆದರೆ, ಈಗ ಕಾಲ ಬದಲಾಗಿದೆ. ಬಹುಕೋಟಿ ವೆಚ್ಚ ಮಾಡದೇ ಚುನಾವಣೆಯನ್ನು ಎದುರಿಸುವ ಪರಿಸ್ಥಿತಿಯೇ ಇಲ್ಲ. ಕೋಟಿಗಟ್ಟಲೆ ಬೆಲೆಬಾಳುವ ಬಂಗಲೆ, ಕಾರು ಹೊಂದಿರುವವರೇ ಮತ ಹಾಕಲು ಹಣಕ್ಕಾಗಿ ಕೈಯೊಡ್ಡುವ ದುರ್ದಿನಗಳಲ್ಲಿ ಹಣವಿಲ್ಲದೆ ಚುನಾವಣೆ ಎದುರಿಸುವುದಾದರೂ ಹೇಗೆ? ಇದು ಭ್ರಷ್ಟಾಚಾರಕ್ಕೆ ಸಮರ್ಥನೆಯಲ್ಲ. ವ್ಯವಸ್ಥೆಯನ್ನು ಸರಿದಾರಿಗೆ ತರುವ ಕುರಿತು ಚರ್ಚೆಯಾಗದೇ, ರಾಜಕಾರಣಿಗಳು ಮಾತ್ರ ಭ್ರಷ್ಟರಾಗಬಾರದು ಎಂದು ಹೇಳುವುದಕ್ಕೆ ಅರ್ಥವೇ ಇರುವುದಿಲ್ಲ.

ಕರ್ನಾಟಕದಲ್ಲಿ ಸಮಾಜವಾದಿ ಚಳವಳಿ ಕಟ್ಟಿದ ಶಾಂತವೇರಿ ಗೋಪಾಲಗೌಡ ಅವರು ಮೂರು ಬಾರಿ ಶಾಸಕರಾಗಿದ್ದವರು. ನಿವೇಶನ, ಮನೆ ಯಾವುದೂ ಅವರಿಗೆ ಇರಲಿಲ್ಲ. ಆಗ ಮುಖ್ಯಮಂತ್ರಿಯಾಗಿದ್ದವರು, ಮನೆ ಕೊಡುವುದಾಗಿ ಹೇಳಿದರು. 'ನನ್ನ ಕ್ಷೇತ್ರದಲ್ಲಿನ ಜನ ಸೇರಿದಂತೆ ರಾಜ್ಯದಲ್ಲಿ ಹಲವರಿಗೆ ಮನೆ?ನಿವೇಶನ ಯಾವುದೂ ಇಲ್ಲ. ಅವರೆಲ್ಲರಿಗೂ ಕೊಟ್ಟ ಮೇಲೆ ನನಗೆ ಕೊಡಿ' ಎಂದು ಶಾಂತವೇರಿ ಹೇಳಿದ್ದರು. ಈಗಿನ ಸಮಾಜವಾದಿಗಳ ಕತೆ?

ಈಗಂತೂ ಪೈಪೋಟಿಗೆ ಬಿದ್ದವರಂತೆ ಒಬ್ಬರ ಮೇಲೊಬ್ಬರು ಪ್ರಕರಣ ದಾಖಲಿಸುವ ಉಮೇದಿನಲ್ಲಿದ್ದಾರೆ. ಯಾರೂ ಸತ್ಯ ಹರಿಶ್ಚಂದ್ರರಲ್ಲ, ಎಲ್ಲರೂ ಒಬ್ಬರನ್ನೊಬ್ಬರು ಕಾಡುವ ನಕ್ಷತ್ರಿಕರೇ. ಮೇಲೆ ಕುಳಿತು ಆಡಿಸುತ್ತಿರುವವರು ನಕ್ಷತ್ರಿಕನನ್ನು ಛೂ ಬಿಟ್ಟ 'ವಿಶ್ವಾಮಿತ್ರ'ರಷ್ಟೆ.

'ಸಿದ್ದರಾಮಯ್ಯನವರನ್ನು ಇಳಿಸಿಯೇ ಸಿದ್ಧ' ಎಂದು ಕುಮಾರಸ್ವಾಮಿ, ವಿಜಯೇಂದ್ರ ಹಾಗೂ ಕೆಲವು ಕಾಂಗ್ರೆಸ್ಸಿಗರು ಸ್ಪರ್ಧೆಗಿಳಿದಿದ್ದಾರೆ. ಸಿದ್ದರಾಮಯ್ಯ ಅಧಿಕಾರದಿಂದ ಇಳಿದರೆ ಇಳಿಯಲಿ, ಅದು ಅವರಿಗೆ, ಪಕ್ಷದ ವರಿಷ್ಠರಿಗೆ ಬಿಟ್ಟ ವಿಚಾರ. ಆದರೆ, ಅವರ ಜಾಗದಲ್ಲಿ ಕೂರುವಂತಹ ಸತ್ಯ ಹರಿಶ್ಚಂದ್ರ ಯಾವ ಪಕ್ಷದಲ್ಲಿದ್ದಾರೆ? ಎಲ್ಲರ ಬಳಿ ಮೂರು ತಲೆಮಾರಿಗೆ ಆಗುವಷ್ಟು ಆಸ್ತಿ ಇರುವಂತೆ, ಅಷ್ಟೇ ಕಾಲ ಎದುರಿಸಬೇಕಾದ ಪ್ರಕರಣಗಳೂ ಇವೆ. ಕಾಂಗ್ರೆಸ್‌ನಲ್ಲಿ ಮುಂಚೂಣಿಯಲ್ಲಿರುವವರ ಪೈಕಿ ಒಬ್ಬರು ಈಗಾಗಲೇ ಜೈಲಿಗೆ ಹೋಗಿ ಬಂದಿದ್ದರೆ, ಮತ್ತೆ ಕೆಲವರು ಆದಾಯ ತೆರಿಗೆಯ ದಾಳಿಗೆ ಒಳಗಾದವರು. ಒಂದಿಬ್ಬರ ಮೇಲಷ್ಟೇ ಪ್ರಕರಣ ಇರಲಿಕ್ಕಿಲ್ಲ.

ಹಾಗಿದ್ದರೂ, ಸರ್ಕಾರದ ನಾಯಕತ್ವ ಬದಲಾವಣೆಯ ಚರ್ಚೆ ಬಲವಾಗಿದೆ. ಭ್ರಷ್ಟಾಚಾರ ಮತ್ತು ಅಧಿಕಾರ ರಾಜಕಾರಣ ಒಂದಕ್ಕೊಂದು ಬೆಸೆದುಕೊಂಡು ವಿಜೃಂಭಿಸುತ್ತಿರುವ ಹೊತ್ತಿನೊಳಗೆ, ಭವಿಷ್ಯದ ಮುಖ್ಯಮಂತ್ರಿ ಸ್ಥಾನಕ್ಕೆ 'ಸಜ್ಜನ'ರೊಬ್ಬರ ಹುಡುಕಾಟವೇ ದೊಡ್ಡ ವ್ಯಂಗ್ಯ.

–ಕೃಪೆ : ಪ್ರ.ವಾ. – ವೈ.ಗ.ಜಗದೀಶ್

## ಸ್ವಚ್ಛತಾ ಹೀ ಸೇವಾ 2024 ಶೀರ್ಷಿಕೆಯನ್ನು ಅಕ್ಷರ ಮೂಲಕ ಜೋಡಿಸಿದ ವಿದ್ಯಾರ್ಥಿಗಳು



**ಮುಧೋಳ :** ನಗರಸಭೆ ಸಹಯೋಗದೊಂದಿಗೆ ಆರ್ ಎಂ ಜಿ ಕಾಲೇಜಿನ ವಿದ್ಯಾರ್ಥಿನಿಯರು ಮತ್ತು ವಿದ್ಯಾರ್ಥಿಗಳು ಸ್ವಚ್ಛತಾ ಹೀ ಸೇವಾ 2024 ಎಂಬ ಶೀರ್ಷಿಕೆಯನ್ನು ಅಕ್ಷರ ಮೂಲಕ ಜೋಡಿಸಿದರು

ನಗರಸಭೆ ಕಿರಿಯ ಆರೋಗ್ಯ ಸಹಾಯಕರಾದ ಸುಭಾಷ್ ಕಾಂಬಳೆ ಅವರು ಸ್ವಚ್ಛತಾ ಈ ಸೇವಾ ಎಂಬ ಕಾರ್ಯಕ್ರಮವನ್ನು ನಡೆಸಿ ಮಾತನಾಡಿದರು ಸ್ವಚ್ಛತೆ ಬಗ್ಗೆ ಸಾರ್ವಜನಿಕರು ಜಾಗ್ರತೆ ವಹಿಸಬೇಕು ಮತ್ತು ತಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿ ಸುಂದರವಾಗಿ ಇಟ್ಟುಕೊಳ್ಳಬೇಕು ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕ ವೃಂದದವರು ಮತ್ತು ವಿದ್ಯಾರ್ಥಿಗಳು ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವಂತಹ ಕೆಲಸ ಮಾಡಬೇಕು ಎಂದು ಹೇಳಿದರು

ಈ ಸಂದರ್ಭದಲ್ಲಿ ಆರ್ ಎಂ ಜಿ ಶಾಲೆಯ ಮುಖ್ಯೋಪಾಧ್ಯಾಯರಾದ ಹಿರೇಮಠ್ ಸರ್ ಗೋವಿಂದಪುರ ಮಠ ಸರ್ ಇನ್ನುಳಿದ ಶಾಲೆಯ ಗುರು ವೃಂದ ನಗರಸಭೆಯ ಕಿರಿ ಆರೋಗ್ಯ ನಿರೀಕ್ಷಕ ಸುಭಾಷ್ ಕಾಂಬಳೆ ದಾನೇಶ್ ಮಾಂಗ್ ಜಯಂವಂತ ಹಿರಲಕ್ಕಿ ವಿಠಲ್ ಮಿರ್ಜಿ ಗುರು ಮಿಶಿ ಸದಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದರು.

## ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ದೇವಸ್ಥಾನ ಜೀರ್ಣೋದ್ಧಾರಕ್ಕೆ 1.50 ಲಕ್ಷ ರೂ. ನೆರವು

**ವಿಜಯಪುರ :** ವಿಜಯಪುರ 2 ತಾಲ್ಲೂಕಿನ ತಿಕೋಟಾ ವಲಯದ ಹರನಾಳ ಕಾರ್ಯಕ್ಷೇತ್ರದ ಶ್ರೀ ಲಕ್ಕಮ್ಮದೇವಿ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಧರ್ಮಾಧಿಕಾರಿ ಡಾ. ವಿ.ವೀರೇಂದ್ರ ಹೆಗ್ಗಡೆ ಅವರು ಬಿಡುಗಡೆ ಮಾಡಿದ 1.50 ಲಕ್ಷ ರೂ.ಗಳ ಡಿಡಿಯನ್ನು ಯೋನೆಯ ಜಿಲ್ಲಾ ನಿರ್ದೇಶಕ ಸಂತೋಷ ಕುಮಾರರೈಅವರುಬುಧವಾರದೇವಸ್ಥಾನದ ಸಮಿತಿಯವರಿಗೆ ಹಸ್ತಾಂತರಿಸಿದರು.

ಈ ವೇಳೆ ಮಾತನಾಡಿದ ಸಂತೋಷ ಕುಮಾರ ರೈ ಅವರು, ಪೂಜ್ಯ ವೀರೇಂದ್ರ ಹೆಗ್ಗಡೆ ಅವರ ಆಶಯದಂತೆ ಗ್ರಾಮೀಣ ಜನರ ಬದುಕನ್ನು ಹಸನಗೊಳಿಸುವ ನಿಟ್ಟಿನಲ್ಲಿ ನಮ್ಮಗ್ರಾಮಾಭಿವೃದ್ಧಿ ಯೋಜನೆ ಎಲ್ಲಾ ಹಂತಗಳಲ್ಲೂ ಕೆಲಸ ಮಾಡುತ್ತಿದೆ. ದೇವಸ್ಥಾನಗಳ ಜೀರ್ಣೋ ದ್ಧಾರಕ್ಕೆ ನೆರವು ನೀಡುವ ಮೂಲಕ ಜನರಲ್ಲಿ ಧಾರ್ಮಿಕ ಹಾಗೂ ಅಧ್ಯಾತ್ಮಿಕ ಅರಿವು ಮೂಡಿಸುವ ಕೆಲಸ ಮಾಡಲಾ ಗುತ್ತಿದೆ. ದೇವಸ್ಥಾನಗಳನ್ನು ಸ್ವಚ್ಛವಾಗಿ ಹಾಗೂ ಸುಂದರವಾಗಿ ಇಟ್ಟುಕೊಳ್ಳಿ ಎಂದು ಗ್ರಾಮಸ್ಥರಿಗೆ ತಿಳಿಸಿದರು.

ದೇವಸ್ಥಾನ ಸಮಿತಿ ಅಧ್ಯಕ್ಷ ಶ್ರೀ ಶರಣಪ್ಪ ನಿಮ್ಮಂಗ್ರಿ ಮಾತನಾಡಿ, ಧರ್ಮಸ್ಥಳ



ಯೋಜನೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ವಿಜಯಪುರ 02 ತಾಲ್ಲೂಕಿನ ಕ್ಷೇತ್ರ ಯೋಜನಾಧಿಕಾರಿಗಳಾದ ಸತೀಶ್ ಸರ್ ಹಾಗೂ ಕೋಟ್ಯಾಳ ಕೆರೆ ಸಮಿತಿ ಅಧ್ಯಕ್ಷರಾದ ಭೀಮನಗೌಡ ಪಾಟೀಲ್, ಕೆರೆ ಸಮಿತಿ ಉಪಾಧ್ಯಕ್ಷರು ಕಾಶೀನಾಥ್ ಕಾಖಂಡಕಿ, ಹರನಾಳ ಗ್ರಾಮ ಪಂಚಾಯತ್ ಅಧ್ಯಕ್ಷರು ಶೋಭಾ ಲಕ್ಷ್ಮಣ್ ಕೈರಾವ್, ಗ್ರಾಮ ಪಂಚಾಯತ್ ಸದಸ್ಯರಾದ ಮಲ್ಲು ಸಿಂಗೆ., ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷರ ಸಂಜು ಕೈರಾವ್, ಊರಿನ ಗಣ್ಯರಾದ ಅಶೋಕ್ ಗೋಡ್ಸೆ. ಬೀರಪ್ಪ ಕಟ್ಟೆ. ಸಿದ್ದರಾಮ್ ಕಳೇಲ್. ಸಂಜೀವ್ ಗೇಂಡ್. ಹನುಮಂತ್ ಶೆಟ್ಟನವರ. ಹನುಮಂತ್ ಕೈರಾವ್. ಮಾದೇವ ಕಟ್ಟೆ. ಮಾದೇವ ನರಳೆ. ಲಕ್ಕಪ್ಪ ರಾನಗಟ್ಟಿ. ದರಿಯಪ್ಪ ಜಮ್ಮನಕಟ್ಟಿ , ವೆಂಕಟೇಶ್ ಗಡ್ಡಿ ಕೃಷಿ ಮೇಲ್ವಿಚಾರಕರು,ಸೇರಿದಂತೆ ಎಲ್ಲಾ ಹರನಾಳ ಗ್ರಾಮಸ್ಥರ ಉಪಸ್ಥಿತಿಯಲ್ಲಿ ಡಿಡಿ ವಿತರಣೆ ಮಾಡಲಾಯಿತು.

## ರಾಜ್ಯಮಟ್ಟಕ್ಕೆ ಆಯ್ಕೆ



**ಮಹಾಲಿಂಗಪುರ :** ಸಮೀಪದ ಕೆಸರಗೊಪ್ಪ ಸರ್ಕಾರಿ ಪ್ರೌಢಶಾಲೆಯ 8ನೇ ವಿದ್ಯಾರ್ಥಿ ವಿನಯ ಈರಗಾರ ಬೆಳಗಾವಿ ವಿಭಾಗಮಟ್ಟದ ಕಬ್ಬಡ್ಡಿ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದುಕೊಂಡು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾನೆ. ವಿದ್ಯಾರ್ಥಿಗೆ ದೈಹಿಕ ಶಿಕ್ಷಣ ನಿರ್ದೇಶಕರಾದ ಸಂಗಮೇಶ ಮುರ್ಕಾತಿಹಾಳ ಮಾರ್ಗದರ್ಶನ ನೀಡಿದ್ದಾರೆ. ಸಾಧಕ ವಿದ್ಯಾರ್ಥಿಗೆ ಶಾಲೆಯ ಮುಖ್ಯ ಗುರುಗಳು, ಎಸ್‌ಡಿಎಂಸಿ ಪದಾಧಿಕಾರಿಗಳು ಅಭಿನಂದಿಸಿದ್ದಾರೆ.




**ವಾಲ್ಮೀಕಿ ಜಯಂತಿ....** ಮಹಾಲಿಂಗಪುರ: ಸಮೀಪದ ರನ್ನಬೆಳಗಲಿ ಪಪಂ ಕಾರ್ಯಾಲಯದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು.

## ಜಿಲ್ಲಾಮಟ್ಟಕ್ಕೆ ಆಯ್ಕೆ

**ಮಹಾಲಿಂಗಪುರ :** ಸಮೀಪದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಧರೆಯಪ್ಪ ಬ್ಯಾಕೋಡ್ ಹ್ಯಾಮರ್ ಥ್ರೋ (ದ್ವಿತೀಯ ಸ್ಥಾನ), ರಾಕೇಶ್ ಮಿರ್ಜಿ ಹ್ಯಾಮರ್ ಥ್ರೋ (ಪ್ರಥಮ), ಸುಸ್ಮಿತಾ ಹೊಂಕಳಿ ಹ್ಯಾಮರ್ ಥ್ರೋ(ಪ್ರಥಮ), ಕೀರ್ತಿ ಕಲ್ಲಟ್ಟಿ ಹ್ಯಾಮರ್ ಥ್ರೋ(ದ್ವಿತೀಯ), ಮಾನಿಂಗ ಚವ್ಹಾಣ 5ಕೀಮಿ ನಡಿಗೆ ಸ್ಪರ್ಧೆ(ಪ್ರಥಮ), ಹರ್ಷ ನೀಲಣ್ಣವರ 400ಮೀಟರ್ ಅಡತಡೇ ಓಟ (ದ್ವಿತೀಯ), ಪೂಜಾ ಸಸಾಲಟ್ಟಿ ಟ್ರಿಪಲ್ ಜಂಪ್ (ಪ್ರಥಮ)ಹಾಗೂ ಅಡತಡೆ ಓಟ (ಪ್ರಥಮ) ರೇಣುಕಾ ಬ್ಯಾಕೋಡ್ 400 ಮೀಟರ್ ಅಡತಡೆ ಓಟ (ದ್ವಿತೀಯ), ವಿನಾಯಕ ಈರಗಾರ 200, 400, 600 ಮೀಟರ್ ಓಟದಲ್ಲಿ ಪ್ರಥಮ ಸ್ಥಾನ ಪಡೆದುಕೊಂಡಿದ್ದಾನೆ. ಸಾಧಕ ಕ್ರೀಡಾಪಟುಗಳಿಗೆ ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು, ಶಾಲೆಯ ಮುಖ್ಯೋಪಾಧ್ಯಾಯರು ಅಭಿನಂದಿಸಿದ್ದಾರೆ.

## ಗುರುಪಾದ ನಾಗರಾಳ ನಿಧನ



**ರಬಕವಿ–ಬನಹಟ್ಟಿ :** ಬನಹಟ್ಟಿಯ ಸೋಮವಾರ ಪೇಟೆ ನಿವಾಸಿ ಗುರುಪಾದ ನಾಗರಾಳ(72) ನಿಧನರಾದರು. ಮೃತರಿಗೆ ಇಬ್ಬರು ಪುತ್ರರು ಹಾಗು ಓರ್ವ ಪುತ್ರಿ ಸೇರಿದಂತೆ ಅಪಾರ ಬಳಗವಿದೆ.

## ಗಿರೀಶ ಸಂಪಗಾಂವಿ ನಿಧನ



**ಬನಹಟ್ಟಿ :** ಸಮೀಪದ ಕುಲ್ಲಹಳ್ಳಿ ಗ್ರಾಮದ ರಹಿವಾಸಿಯಾಗಿದ್ದ ಗಿರೀಶ ಮಹಾದೇವ ಸಂಪಗಾಂವಿ ತಮ್ಮ 52 ನೆಯ ವಯಸ್ಸಿನಲ್ಲಿ ಅಕ್ಟೋಬರ 17 ರಂದು ನಿಧನರಾದರು.ಮೃತರು ತಮ್ಮ ಹಿಂದೆ ವೃದ್ಧ ತಾಯಿ, ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ದೇವರು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಧಡಲ್ ಬಾಜಿ ಕನ್ನಡ ದಿನಪತ್ರಿಕೆ ಬಳಗದಿಂದ ಪ್ರಾರ್ಥಿಸುತ್ತೇವೆ.

## ಅಶೋಕ ಬಿಳ್ಳೂರ ನಿಧನ



**ರಬಕವಿ–ಬನಹಟ್ಟಿ :** ಬನಹಟ್ಟಿಯ ಸೋಮವಾರ ಪೇಟೆ ನಿವಾಸಿ ಅಶೋಕ ಬಿಳ್ಳೂರ(69) ನಿಧನರಾದರು. ಮೃತರಿಗೆ ಪತ್ನಿ, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಳಗವಿದೆ.

## ವಿಜಯಪುರ ಜಿಲ್ಲೆಯಲ್ಲಿ 2,092 ಮತಗಟ್ಟೆ

**ವಿಜಯಪುರ :** ಜಿಲ್ಲೆಯಲ್ಲಿ ಒಟ್ಟು 2085ಮತಗಟ್ಟೆಗಳಿದ್ದು,ಅವುಗಳಲ್ಲಿ ಒಂದೇ ಆವರಣದ ಒಂದೇ ಕಟ್ಟಡದಲ್ಲಿರುವ ಮತಗಟ್ಟೆಯ ಮತದಾರರನ್ನು ಪಕ್ಕದಲ್ಲಿರುವ ಬೇರೆ ಕೋಣೆಯಲ್ಲಿರುವ ಮತಗಟ್ಟೆಗೆ ವಿಲೀನಗೊಳಿಸಲು 1 ಮತಗಟ್ಟೆಯನ್ನು ಪಕ್ಕದ ಕಟ್ಟಡಕ್ಕೆ ಅಂದರೆ ಅದೇ ಆವರಣದ ಬೇರೆ ಕೊಣೆಯಲ್ಲಿರುವ ಮತಗಟ್ಟೆಗೆ ವಿಲೀನಗೊಳಿಸಲು ಹಾಗೂ 8 ಮತಗಟ್ಟೆಗಳಲ್ಲಿ1,500ಕ್ಕಿಂತಹೆಚ್ಚಿಗೆ ಮತದಾರರಿರುವ ಮತಗಟ್ಟೆಗಳಲ್ಲಿ ಹೊಸದಾಗಿ ಮತಗಟ್ಟೆ ಸ್ಥಾಪಿಸಲು ಭಾರತ ಚುನಾವಣೆ ಆಯೋಗ–ಕ್ಕೆ ಪ್ರಸ್ತಾನನೆ ಸಲ್ಲಿಸಲಾಗಿತ್ತು. ಅದರಂತೆ ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಅರ್ಹತಾ ದಿ.01–01–2025ಕ್ಕೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಒಟ್ಟು 2,092 ಮತಗಟ್ಟೆಗಳು ಅಸ್ತಿತ್ವದಲ್ಲಿರುತ್ತವೆ ಎಂದು ಜಿಲ್ಲಾಧಿಕಾರಿ ಟಿ.ಭೂಬಾಲನ್ ತಿಳಿಸಿದ್ದಾರೆ.

## ಡಿಡಿಪಿಐ ಎನ್. ಎಚ್. ನಾಗೂರ ಅಮಾನತು

**ವಿಜಯಪುರ :** ಕರ್ತವ್ಯಲೋಪ ಹಿನ್ನೆಲೆ ವಿಜಯಪುರ ಡಿಡಿಪಿಐ ಎನ್.ಎಚ್. ನಾಗೂರ ಅವರನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಸೇವೆಯಿಂದ ಅಮಾನತು ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ವಿಜಯಪುರ ಜಿಲ್ಲೆಯಲ್ಲಿ 2024–25ರಲ್ಲಿ ಹೊಸ ಶಾಲೆಯ ನೋಂದಣಿ ಪ್ರಕ್ರಿಯೆಲ್ಲಿ ನಿಯಮಬಾಹಿರ ಅನುಮೋದನೆ ನೀಡಿದಹಿನ್ನೆಲೆ,ಡಿಡಿಪಿಐನಾಗೂರ ವಿರುದ್ಧ ಶಿಸ್ತು ಕ್ರಮ ಬಾಕಿ ಇರಿಸಿ, ತಕ್ಷಣದಿಂದ ಅಮಾನತು ಜಾರಿಗೆ ಬರುವಂತೆ ಆದೇಶಿಸಲಾಗಿದೆ. ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಅಧೀನ ಕಾರ್ಯದರ್ಶಿ ಮಲ್ಲಿಕಾರ್ಜುನ ರಾಮಚಂದ್ರಪ್ಪ ಅವರು ಡಿಡಿಪಿಐ ನಾಗೂರ ಅವರನ್ನು ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ.

## ಮಹರ್ಷಿ ವಾಲ್ಮೀಕಿ ಆದಿಕವಿಯಾಗಿದ್ದಾರೆ: ಡಾ. ಸುರೇಶ ಹನಗಂಡಿ



**ಮೂಡಲಗಿ :** ಸಂಸ್ಕೃತದಲ್ಲಿ ಮೊಟ್ಟ ಮೊದಲಿಗೆ ರಾಮಾಯಣ ಮಹಾಕಾವ್ಯ ರಚಿಸುವ ಮೂಲಕ ಭಾರತೀಯ ಸಾಹಿತ್ಯ ಕ್ಷೇತ್ರಕ್ಕೆ ಅನನ್ಯವಾದ ಕೊಡುಗೆಯನ್ನು ನೀಡಿರುವ ಆದಿಕವಿ ಮಹರ್ಷಿ ವಾಲ್ಮೀಕಿಯವರನ್ನು ಸ್ಮರಿಸಿಕೊಂಡು ಗೌರವ ಸಲ್ಲಿಸುವ ಮತ್ತು ಕಾವ್ಯದ ಮೂಲಕ ನೀಡಿರುವ ಆದರ್ಶ ಮೌಲ್ಯಗಳನ್ನು ಯುವ ಪೀಳಿಗೆಗೆ ತಿಳಿಸುವ ಹಿನ್ನಲೆಯಲ್ಲಿ ಪ್ರತಿ ವರ್ಷವು ವಾಲ್ಮೀಕಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ ಎಂದು ಪ್ರಾಚಾರ್ಯ ಡಾ. ಸುರೇಶ ಹನಗಂಡಿ ಹೇಳಿದರು.

ಕಲ್ಲೋಳಿ ಪಟ್ಟಣದ ಶ್ರೀ ರಾಮಲಿಂಗೇಶ್ವರ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕ ಗುರುವಾರದಂದು ಹಮ್ಮಿಕೊಂಡಿದ್ದ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಉದ್ದೇಶಿಸಿ ಮಾತನಾಡಿದರು.

ಪ್ರೊ. ಡಿ.ಎಸ್. ಹುಗ್ಗಿ ಮಾತನಾಡಿ, ಮಹರ್ಷಿ ವಾಲ್ಮೀಕಿಯವರು ಮಹಾತಪಸ್ವಿಗಳು, ತಪದಿಂದ ದೈವಶಕ್ತಿಯನ್ನು ಪಡೆದುಕೊಂಡು ಅಗಾಧವಾದ ತಮ್ಮ ಕಾವ್ಯ ಪ್ರತಿಭೆಯಿಂದ ಸೃಷ್ಟಿಸಿರುವ ರಾಮಾಯಣ ಮಹಾಕಾವ್ಯದಲ್ಲಿರುವ ಮನೋಜ್ಞ ಪಾತ್ರಗಳ ಮೂಲಕ ನಿರೂಪಿಸಿರುವ ಜೀವನ ಮೌಲ್ಯಗಳು ಮತ್ತು ಆದರ್ಶಗಳು, ಕಾವ್ಯದಲ್ಲಿನ ಬಹುವಿಷಯ ಪಾಂಡಿತ್ಯ, ಕಾವ್ಯವಸ್ತುಶ್ರೇಷ್ಠತೆ, ವೈಜ್ಞಾನಿಕ ಪರಿಕಲ್ಪನೆಗಳು ಜಗತ್ತಿನ ಯಾವುದೇ ಕಾವ್ಯದಲ್ಲೂ ಕಂಡುಬರುವುದಿಲ್ಲ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಅಧ್ಯಾಪಕರುಗಳಾದ ಡಾ. ಎಂ.ಬಿ. ಕುಲಮೂರ, ಆರ್. ಎಸ್. ಪಂಡಿತ, ವಿಲಾಸ ಕೆಳಗಡೆ, ಎಸ್.ಎಂ. ಬಂಡಿ, ಸಂತೋಷ ಜೋಡಕುರಳಿ, ಎಂ.ಎನ್. ಮುರಗೋಡ, ಮಲ್ಲಪ್ಪ ಕರಗಣ್ಣಿ, ಬಿ.ಸಿ. ಮಾಳಿ, ಸಾಗರ ಐದಮನಿ, ಗ್ರಂಥಪಾಲಕ ಬಿ.ಬಿ. ವಾಲಿ, ಬಿ.ಕೆ. ಸೊಂಟನವರ ಹಾಗೂ ಬೋಧಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಕವಿ ಕುಲ ಸಾರ್ವಭೌಮ–ಪ್ರಾಚಾರ್ಯ ಜಿ.ವ್ಹಿ.ನಾಗರಾಜ್



**ಮೂಡಲಗಿ :** ಒಂದೇ ಕಾವ್ಯದಲ್ಲಿ ರಾಮ ಲಕ್ಷ್ಮಣ ಸೀತೆ ಹನುಮ ರಾವಣ ಸೇರಿದಂತೆ ನೂರಾರು ಪಾತ್ರಗಳನ್ನು ಮಾನವೀಯತೆ ಭ್ರಾತೃತ್ವ ತ್ಯಾಗ ಸಮತೆ ಕರುಣೆ ಧರ್ಮ ರಕ್ಷಣೆ ರಾಜ ನೀತಿಯಂತಹ ನೂರಾರು ಆದರ್ಶಗಳನ್ನು 24,000 ಶ್ಲೋಕಗಳಲ್ಲಿ ಸೃಷ್ಟಿಸಿದ ಕವಿ ಕುಲ ಸಾರ್ವಭೌಮ ಮಹರ್ಷಿ ವಾಲ್ಮೀಕಿ ಯಂದು ಮೂಡಲಗಿ ಶಿಕ್ಷಣ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ. ಜಿ.ವ್ಹಿ.ನಾಗರಾಜ್ ಅಭಿಪ್ರಾಯಪಟ್ಟರು.

ಇಂದು ಅವರು ಮೂಡಲಗಿ ಶಿಕ್ಷಣ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಏರ್ಪಡಿಸಿದ ಮಹರ್ಷಿ ವಾಲ್ಮೀಕಿ ಜಯಂತಿ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.

ರಾಮಾಯಣ ಮಹಾ ಕಾವ್ಯವು ಭಾರತದ ಚಿತ್ರ ಕಲೆ ರಂಗ ಭೂಮಿ ನಾಟಕ ಯಕ್ಷಗಾನ ಚಲನ ಚಿತ್ರ ಮುಂತಾದ ಕ್ಷೇತ್ರಗಳ ಮೇಲೆ ಆಗಾಧವಾದ ಪ್ರಭಾವವು ಬೀರಿದರೆ ಮಹರ್ಷಿ ವಾಲ್ಮೀಕಿ ವಿಶ್ವ ಕವಿಯಾಗಿ ಇತಿಹಾಸಕಾರಗಿ ಶಾಸ್ತ್ರಜ್ಞರಾಗಿ ತತ್ವಜ್ಞಾನಿಯಾಗಿ ಗೌರವಿಸಲ್ಪಡುತ್ತಾರೆ ಎಂದರು.

ಮುಖ್ಯ ಅತಿಥಿ ಪ್ರೊ.ಲೋಕೇಶ ಹಿಡಕಲ್ ಮಾತನಾಡಿದ ಮಹರ್ಷಿ ವಾಲ್ಮೀಕಿಯವರ ಜನ್ಮ ದಿನಾಚರಣೆ ಕೇವಲ ಆಚರಣೆಯಾಗದೆ ಅವರ ತತ್ವ ಆದರ್ಶಗಳನ್ನು ನಾವು ಮೈಗೂಡಿಕೊಂಡರೆ ಸಾರ್ಥಕತೆಯಾಗುತ್ತದೆ ಎಂದರು.

ಸಮಾರಂಭದಲ್ಲಿ ಎಂ.ಎಸ್. ಕುಂದರಗಿ. ಬಿ.ಎಸ್. ಸಪ್ತಸಾಗರ,ಗ್ರಂಥ ಪಾಲಕ ಡಾ.ಬಸವಂತ ಬರಗಾಲಿ, ಭಾರತಿ. ತಳವಾರ,ಮನೋಹರ ಲಮಾಣಿ,ಅರ್ಜುನ್ ಗಸ್ತಿ,ಪಾಂಡು ಬುದ್ನಿ,ಲಕ್ಷ್ಮಣ ನಂದಿ,ವೆಂಕಟೇಶ ಪಾಟೀಲ, ರಮೇಶ ಖಾನಪ್ಪಗೋಳ, ಕಲ್ಮೇಶ ಇಂಗಳೆ ಮುಂತಾದವರು ಉಪಸ್ಥಿತರಿದ್ದರು.

ಐ.ಕ್ಯೂ.ಎ.ಸಿ ಕೊರ್ಡಿನೇಟರ (ಸಮನ್ವಯಾಧಿಕಾರಿ) ಹಾಗೂ ರಾಷ್ಟ್ರೀಯ ಸೇವಾ ಯೋಜನಾಧಿಕಾರಿಗಳು ಡಾ. ಎಸ್.ಎಲ್.ಚಿತ್ರಗಾರ ಸ್ವಾಗತಿಸಿದರು. ಕಾರ್ಯಕ್ರಮವನ್ನು ಪ್ರೊ. ಪ್ರೀತಿ ಬೆಳಗಲಿ ನಿರ್ವಹಿಸಿದರು. ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಪ್ರೊ. ಎಸ್.ಸಿ. ಮಂಟೂರ್ ವಂದಿಸಿದರು.

## ಉಚಿತ ಆರೋಗ್ಯ ಶಿಬಿರ





ಕೆ ಆರ್ತಾ ಪೇಟೆ ಲೂಕಿನ ಶ್ರೀ–ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ಶಿವಶಕ್ತಿ ಐ ಕೇರ್ ಇವರ ಸಹಯೋಗದೊಂದಿಗೆ ಸೋಮನಹಳ್ಳಿ ವಲಯದ ಗಂಜಿಗೆರೆ ಕಾವೇರಿ ಜ್ಞಾನ ವಿಕಾಸ ಕೇಂದ್ರದ ವತಿಯಿಂದ ಉಚಿತ ಕಣ್ಣಿನ ತಪಾಸಣೆ ಹಾಗೂ ಆರೋಗ್ಯ ತಪಾಸಣಾ ಶಿಬಿರವನ್ನು ತಾಲ್ಲೂಕು ಯೋಜನಾಧಿಕಾರಿಗಳಾದ ತಿಲಕ್ ರಾಜ್, ಜಿಲ್ಲಾ ಗೌರವಾನ್ವಿತ ಜಿಲ್ಲಾ ನಿರ್ದೇಶಕ ರಾದ ಕೇಶವ ದೇವಾಂಗ ರವರು ಜ್ಯೋತಿ ಬೆಳಗಿಸುವ ಮೂಲಕ ದೀಪ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು._*

ನಮ್ಮ ದೇಹದ ಪಂಚೇಂದ್ರಿಯಗಳಲ್ಲಿ ಕಣ್ಣು ಬಹಳ ಮಹತ್ವ ಹೊಂದಿದೆ ಯಾಕೆಂದರೆ ಮನುಷ್ಯ ದೇಹವು ಸಹ ಒಂದು ಯಂತ್ರದಂತೆ ಆದರೆ ದೇಹದ ಎಲ್ಲಾ ಅಂಗಾಂಗಗಳನ್ನು ನಾವು ಕೃತಕ ಜೋಡಣೆ ಮಾಡಬಹುದು ಆದರೆ ಕಣ್ಣಿನ ದೃಷ್ಟಿ ಒಮ್ಮೆ ಕಳೆದು ಕೊಂಡರೆ ಮತ್ತೆ ಕೃತಕವಾಗಿ ಜೋಡಣೆ ಸಾದ್ಯವಿಲ್ಲ . ಆದುದರಿಂದ ನಾವು ಸತ್ತ ನಂತರವೂ ನಮ್ಮ ದೇಹ ಮಣ್ಣಲ್ಲಿ ಮಣ್ಣಾಗುವ ಮೊದಲು ನಾವು ನೇತ್ರ ದಾನ ಮಾಡಬೇಕು, ಪ್ರಪಂಚದಲ್ಲಿ ಎಷ್ಟೋಜನ ಹುಟ್ಟು ಕುರುಡರು ಇದ್ದು ಅವರು ಪ್ರಪಂಚವನ್ನು ನೋಡಲಾಗದ ಸ್ಥಿತಿಯಲ್ಲಿದ್ದಾರೆ ನಾವು ಒಂದು ಅಳಿಲು ಸೇವೆ ಮಾಡುವ ಮೂಲಕ "ನೇತ್ರದಾನ – ಮಹಾದಾನ " ಎನ್ನುವುದನ್ನು ಅರಿತು ನಮ್ಮ ಕಣ್ಣನ್ನು ದಾನ ಮಾಡಬೇಕು ಎಂದು ತಿಳಿಸಿದರು._

**ವರದಿ: ಸಾಯಿಕುಮಾರ್ ಎನ್ ಕೆ ಮಂಡ್ಯ**

## ಜಿಲ್ಲಾಧಿಕಾರಿ ಟಿ.ಭೂಬಾಲನ್ ನೇತೃತ್ವದಲ್ಲಿ ಜಿಲ್ಲಾ ಮಟ್ಟದ ರಸ್ತೆ ಸುರಕ್ಷತಾ ಸಮಿತಿ ಸಭೆ



**ವಿಜಯಪುರ :** ಸೋಮವಾರ ಬೆಳಗ್ಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ರಸ್ತೆ ಸುರಕ್ಷತಾ ಸಮಿತಿ ಸಭೆ ನಡೆಯಿತು.

ಈ ವೇಳೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಂಕರ ಮಾರಿಹಾಳ, ವಿಜಯಪುರ ಉಪವಿಭಾಗಾಧಿಕಾರಿ ಗುರುನಾಥ ದಡ್ಡಿ, ಮಹಾನಗರ ಪಾಲಿಕೆ ಆಯುಕ್ತ ವಿಜಯಕುಮಾರ ಮೆಕ್ಕಳಕಿ, ಲೋಕೋಪಯೋಗಿ ಕಾರ್ಯನಿರ್ವಾಹಕ ಅಭಿಯಂತರರು ಸಿ.ಬಿ.ಚಿಕ್ಕಲಗಿ, ಪ್ರಾದೇಶಿಕ ಸಾರಿಗೆ ಅಧಿಕಾರಿ ವಸೀಮಬಾಬಾ ಮುದ್ದೇಬಿಹಾಳ, ಕಕರಸಾ ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿ ನಾರಾಯಣಪ್ಪ ಕುರುಬರ, ಸಹಾಯಕ ಸಂಚಾರ ವ್ಯವಸ್ಥಾಪಕರು ಜೆ,ಕೆ. ಹುಗ್ಗೆನ್ನವರ್, ಕಾರ್ಮಿಕ ಇಲಾಖೆಯ ಸಜ್ಜನ, ಪೀಟರ್ ಅಲೆಕ್ಸಾಂಡರ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿ ಸಿಬ್ಬಂದಿಗಳು ಉಪಸ್ಥಿತರಿದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State